ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 3
ಜನವರಿ 2023
SHRIDEVI ANTARANGA
Monthly Magazine






ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಸಮುದಾಯವನ್ನು ಪ್ರಬುದ್ಧವಾಗಿಸಿದ ಮಹಾನ್ ಸಂತ



2023ರ 2ನೆಯ ತಾರೀಖು ಸೋಮವಾರ ಹೊಸವರ್ಷದ ಆರಂಭದ ದಿನ. 1ನೆಯ ತಾರೀಖು ಭಾನುವಾರ ಬಂದ ಕಾರಣ ಎಲ್ಲರಿಗೂ ಸೋಮವಾರವೇ ವರ್ಷದ ಮೊದಲ ದಿನವಾಗಿತ್ತು. ಅಂದು ವೈಕುಂಠ ಏಕಾದಶಿಯ ದಿನವೂ ಹೌದು! ವರ್ಷಕ್ಕೊಮ್ಮೆ ಬರುವ ವೈಕುಂಠ ಏಕಾದಶಿಯ ಸಂದರ್ಭ ಶ್ರೀವೆಂಕಟೇಶ್ವರ ಸ್ವಾಮಿಯ ದರ್ಶನಕ್ಕೆ ಭಕ್ತರು ರಾತ್ರಿ  ಹನ್ನೊಂದು ಘಂಟೆಯ ತನಕ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆಯುತ್ತಾರೆ.

ಇಂತಹ ಪವಿತ್ರ ದಿನವನ್ನೇ ವಿಜಯಪುರದ ಜ್ಞಾನಯೋಗಾಶ್ರಮದ ಪೂಜ್ಯ ಸಿದ್ಧೇಶ್ವರ ಸ್ವಾಮಿಗಳು ತಮ್ಮ ದೇಹತ್ಯಾಗಕ್ಕೆ ಆಯ್ಕೆ ಮಾಡಿಕೊಂಡಿರಬೇಕು. ಕಳೆದ ಒಂದು ತಿಂಗಳಿಂದ ಪೂಜ್ಯರು ತಮ್ಮ ಆಶ್ರಮದಲ್ಲೇ ಇದ್ದರು. ಮುಖ್ಯಮಂತ್ರಿ ಕೊನೆಗೆ ಪ್ರಧಾನ ಮಂತ್ರಿಗಳು 'ನಿಮಗೆ ಉತ್ತಮ ಚಿಕಿತ್ಸೆ ಕೊಡಿಸುತ್ತೇವೆ' ಎಂದರೆ, ಮಲಗಿದ್ದ ಕಡೆಯಿಂದಲೇ ಕೈಮುಗಿದು ನಮಸ್ಕರಿಸಿ ಅವರ ಸಲಹೆಯನ್ನು ನಯವಾಗಿ ತಿರಸ್ಕರಿಸಿದ್ದರು. ಇದಕ್ಕೆ ಕಾರಣ, ಹಿಂದೆ ತಾವು ಪ್ರವಚನದಲ್ಲಿ ಹೇಳಿದ್ದ ಮಾತುಗಳು ಶ್ರೀ ಸಿದ್ಧೇಶ್ವರ ಸ್ವಾಮಿಗಳ ನೆನಪಿಗೆ ಬಂದಿರಬಹುದು. "ನಮ್ಮದಾಗಿರುವ ಭಾಗ್ಯದಲ್ಲಿಯೇ ನಾವು ಸಂತುಷ್ಟರಾಗಿರಬೇಕು. ಅನ್ಯರ ಭಾಗ್ಯ ಕಂಡು ಆನಂದಪಡಬೇಕು. ಯಾವುದೇ ಕಾರಣಕ್ಕೂ ಅದನ್ನು ಅಪೇಕ್ಷೆ ಪಡಬಾರದು".

ಶ್ರೀಸಿದ್ಧೇಶ್ವರ ಸ್ವಾಮಿಗಳು ತಾವು ಬೋಧಿಸಿದ ತತ್ವಗಳ ಅನುಸಾರ ನಡೆದು ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರನ್ನು ಅರ್ಥಪೂರ್ಣವಾಗಿ ನೆನೆಯುವಂತೆ ಮಾಡಿದ್ದಾರೆ. ಪೂಜ್ಯ ಶ್ರೀಸಿದ್ಧೇಶ್ವರ ಸ್ವಾಮಿಗಳನ್ನು ನಾನು ಒಂದಲ್ಲ ಹತ್ತಾರು ಬಾರಿ ಕಂಡಿದ್ದೇನೆ. ಅವರ ಪ್ರವಚನಗಳನ್ನು ಶ್ರದ್ಧೆಯಿಂದ ಆಲಿಸಿದ್ದೇನೆ. ನಾನು ನವಲಗುಂದದಲ್ಲಿ ಖಾಸಗಿ ಪ್ರಾಕ್ಟೀಸ್ ಮಾಡುತ್ತಿರಬೇಕಾದರೆ ಅಲ್ಲಿ ಸ್ವಾಮಿ ಒಂದು ತಿಂಗಳು ಪ್ರವಚನ ನೀಡಿದ್ದರು. ಶ್ರೀ ಸಿದ್ಧೇಶ್ವರ ಸ್ವಾಮಿ ಪ್ರವಚನದ ವೈಶಿಷ್ಟ್ಯವೇ ಹಾಗೆ! ಅವರು ಎಲ್ಲೇ ಪ್ರವಚನ ಮಾಡಲಿ ಇಪ್ಪತ್ತು ದಿನ ಅಥವಾ ತಿಂಗಳುಗಳ ಕಾಲ ನಡೆಯುತ್ತದೆ.

▶▶ 5ನೇ ಪುಟಕ್ಕೆ...

# ಭಾರತೀಯರು ಮರೆಯಬಾರದ ದಿನ

■ ಡಾ. ಲಾವಣ್ಯ ರಮಣ ಹುಲಿನಾಯ್ಕರ್
ನೇತ್ರ ತಜ್ಞರು
99028 26470



ಭಾರತೀಯರು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾದರೆ ಎರಡು ದಿನಗಳನ್ನು ನಾವು ಮರೆಯಬಾರದು. ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ನಾವು ಆ ಎರಡು ದಿನಗಳನ್ನು ಸಂಭ್ರಮದಿಂದ ಆಚರಿಸುತ್ತಿದ್ದೆವು. ಆ ದಿನಗಳ ಬಗೆಗೆ ಅಧ್ಯಾಪಕರು ಹೇಳಿದ ಸಂಗತಿಯಷ್ಟೇ ನಮಗೆ ಗೊತ್ತಿರುತ್ತಿತ್ತು. ಈಗ ಹಾಗಲ್ಲ, ನಾವು ಪ್ರಬುದ್ಧರಾಗಿದ್ದೇವೆ, ದೇಶದ ಎಲ್ಲ ವಿಶ್ವದ ಆಗು–ಹೋಗುಗಳು ನಮಗೆ ಪರಿಚಿತವಾಗಿರುತ್ತವೆ. ನಮ್ಮಗಳ ತಿಳಿವಳಿಕೆಯಲ್ಲಿ ಆ ದಿನಗಳ ಮಹತ್ವವನ್ನು ಸಮರ್ಥವಾಗಿ ತಿಳಿಸುತ್ತೇವೆ. ಹಾಗಾದರೆ ಆ ಎರಡು ದಿನಗಳು ಯಾವುವು? ಮೊದಲನೆಯದು ಆಗಸ್ಟ್ 15. ಭಾರತ ಸ್ವಾತಂತ್ರ್ಯ ಗಳಿಸಿದ ದಿನ. ಎರಡನೆಯದು ಜನವರಿ 26. ಭಾರತವು ಸಂವಿಧಾನವನ್ನು ಒಪ್ಪಿಕೊಂಡು ಗಣರಾಜ್ಯವೆನಿಸಿದ ದಿನ. ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಎಲ್ಲ ಭಾರತೀಯರ ಪವಿತ್ರ ಹಬ್ಬಗಳಾಗಿವೆ.

ಈಗ ನಾವು ಜನವರಿ 26ರ ಮಹತ್ವವನ್ನು ತಿಳಿಯೋಣ! 1950 ಜನವರಿ 26ರಂದು ಭಾರತ ಗಣರಾಜ್ಯವಾಯಿತು. 15.8.1947ರಲ್ಲಿ 'ಸಂವಿಧಾನ ರಚನಾ ಸಮಿತಿ' ರಚನೆಗೆ ಅನುಮೋದನೆ ದೊರೆಯಿತು. ಅಂದಿನ ಪ್ರಧಾನಿಗಳಾಗಿದ್ದ ಪಂಡಿತ್ ಜವಾಹರಲಾಲ್ ನೆಹರೂ ಅವರು ಆ ಹೊತ್ತಿಗೆ ಖ್ಯಾತರಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಸಲಹಾ ಸಮಿತಿಯ ಅಧ್ಯಕ್ಷರಾಗಿ ಹಾಗೂ ಭಾರತದ ಕಾನೂನು ಸಚಿವರಾಗಿ ಕೆಲಸ ಮಾಡುವಂತೆ ಆಹ್ವಾನ ನೀಡಿದರು. ಡಾ.ಬಿ.ಆರ್. ಅಂಬೇಡ್ಕರ್ ಅವರು ಈ ಆಹ್ವಾನವನ್ನು ಒಪ್ಪಿಕೊಂಡರು.

ಡಾ. ಬಿ.ಆರ್. ಅಂಬೇಡ್ಕರ್ ಅಸ್ಪೃಶ್ಯತೆಯ ಕಾರಣಕ್ಕಾಗಿ ಅನುಭವಿಸಿದ ನೋವು ವರ್ಣಿಸಲು ಸಾಧ್ಯವಿಲ್ಲ. ಅವರ ಶಾಲಾಶಿಕ್ಷಣ ಶಾಲೆಯ ಬಾಗಿಲ ಬಳಿ ಕುಳಿತು ಪಾಠ ಕೇಳುವ ಸ್ಥಿತಿಯೊಡನೆ ನಡೆಯಿತು. 1907ರಲ್ಲಿ ಅವರು ಎಸ್.ಎಸ್.ಎಲ್.ಸಿ.ಯನ್ನು ಉತ್ತಮ ಅಂಕಗಳೊಂದಿಗೆ ಪಾಸು ಮಾಡಿದ ಮೇಲೆ ಹಿಂದಿರುಗಿ ನೋಡಲಿಲ್ಲ. ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿಹೆಚ್.ಡಿ. ಪದವಿಗಳನ್ನು ಅವರು ಪಡೆದರು. ಇಂಗ್ಲೆಂಡ್‌ನಲ್ಲೂ ಎರಡು ಪದವಿ ಪಡೆದರು. ಕಾನೂನು ಪದವಿ ಗಳಿಸಿದರು. ಡಾ. ಅಂಬೇಡ್ಕರ್ ಇಂತಹ ಮಹಾ ವಿದ್ವಾಂಸರಾದ ಕಾರಣ, ಭಾರತದ ಸಂವಿಧಾನವು ಎಲ್ಲಾ ಭಾರತೀಯರ ಆಶೋತ್ತರಗಳಿಗೆ ಸಮರ್ಥವಾಗಿ ಸ್ಪಂದಿಸಲು ಸಾಧ್ಯವಾಯಿತು.

1927ರಲ್ಲಿ ದಮನಿತ ಜನರ ನ್ಯಾಯೋಚಿತ ಹಕ್ಕುಗಳನ್ನು ಪಡೆಯಲು ಡಾ. ಬಿ.ಆರ್. ಅಂಬೇಡ್ಕರ್ ಸಾರ್ವಜನಿಕ ಕ್ಷೇತ್ರಕ್ಕೆ ಆಗಮಿಸಿದರು. ಡಾ. ಅಂಬೇಡ್ಕರ್ ಅವರಿಂದಾಗಿ ದೇಶದ ಎಲ್ಲಾ ನಾಯಕರು ಪರಿಶಿಷ್ಟ ಜಾತಿಯ ಏಳಿಗೆ ಕುರಿತಂತೆ ಮಾತನಾಡಲು ಪ್ರಾರಂಭಿಸಿದರು. ಸ್ವತಃ ಬ್ರಿಟಿಷ್ ಸರ್ಕಾರ ಡಾ. ಅಂಬೇಡ್ಕರ್ ಅವರ ಹೋರಾಟವನ್ನು ಬೆಂಬಲಿಸಿತ್ತು. ಅದಕ್ಕಾಗಿಯೇ ಅವರನ್ನು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು.




ಇಂದು ಭಾರತದ ಎಲ್ಲಾ ವರ್ಗ, ಜಾತಿ ಹಾಗೂ ಲಿಂಗದ ಯುವಜನರು ವಿಶ್ವದ ಎಲ್ಲಾ ಕಡೆ ಕೆಲಸ ಮಾಡುತ್ತಾ ದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರ ಪ್ರತಿಭೆ ವಿಶ್ವ ಮಟ್ಟದಲ್ಲಿ ಅಭಿವ್ಯಕ್ತವಾಗುತ್ತಿದೆ. ಇದಕ್ಕೆ ಕಾರಣರು ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಅವರು ರಚಿಸಿದ ಸಂವಿಧಾನವೆಂದರೆ ತಪ್ಪಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ದೇಶದ ಅಕ್ಷರಸ್ಥರ ಸಂಖ್ಯೆ ಶೇಕಡ 2ರಷ್ಟು ಮಾತ್ರವಿತ್ತು. ಶೋಷಿತ ಸಮಾಜದಲ್ಲಿ ಶೇಕಡ 99ರಷ್ಟು ಅನಕ್ಷರಸ್ಥರಿದ್ದರು.



ಈ ಸಮೂಹದಲ್ಲಿ ಜಮೀನಿದ್ದವರು ಬೆರಳೆಣಿಕೆಯಷ್ಟು ಜನರು ಮಾತ್ರ. ಎಲ್ಲಾ ಜಾತಿಯ ಹೆಣ್ಣು ಮಕ್ಕಳು ಶಾಲೆಯ ಮುಖವನ್ನೇ ನೋಡಿರಲಿಲ್ಲ.

ಡಾ. ಬಿ.ಆರ್. ಅಂಬೇಡ್ಕರ್ ದೇಶದ ಎಲ್ಲಾ ನಾಗರಿಕರಿಗೂ ಮತದಾನದ ಹಕ್ಕುಕೊಟ್ಟರು. ಅದರಲ್ಲೂ ಮಹಿಳೆಯರಿಗೆ ಸಮಾನತೆ ಮತ್ತು ಮತದಾನದ ಹಕ್ಕು ದೊರಕಿದ್ದರೆ ಅದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರೇ ಕಾರಣಕರ್ತರು. ಒಂದು ಪಕ್ಷ ಅಕ್ಷರಸ್ಥರಿಗೆ ಹಾಗೂ ಕೊನೆಯಪಕ್ಷ 5 ರೂ.ಗಳ ಕಂದಾಯವನ್ನು ಪಾವತಿ ಮಾಡುವವರಿಗೆ ಮತದಾನದ ಹಕ್ಕು ಎಂದು ಭಾರತದ ಸಂವಿಧಾನ ಹೇಳಿದ್ದರೆ ಭಾರತದಲ್ಲಿ ಪ್ರಜಾಪ್ರಭುತ್ವ ಕೆಲವರಿಗೆ ಮಾತ್ರವಾಗಿರುತ್ತಿತ್ತು. ಇಂದು ನಾವು ನೋಡುತ್ತಿರುವ ಭಾರತೀಯ ಸಮಾಜ ಕಾಣುತ್ತಿರಲಿಲ್ಲ. ಸ್ವಾತಂತ್ರ್ಯ ಪಡೆದು 75 ವರ್ಷಗಳ ನಂತರ ಭಾರತೀಯ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಅವಲೋಕಿಸಿದರೆ ಡಾ. ಅಂಬೇಡ್ಕರ್ ಅವರ ಸಂವಿಧಾನದ ಮಹತ್ವ ಗೊತ್ತಾಗುತ್ತದೆ.

ಜಾತಿ ವಿನಾಶಕ್ಕೆ ಭಾರತದಲ್ಲಿ ಅನೇಕ ಮಹಾತ್ಮರು ಹೋರಾಟ ನಡೆಸಿದ್ದಾರೆ. ಅವರಲ್ಲಿ 12ನೆಯ ಶತಮಾನದ ಭಕ್ತಿಭಂಡಾರಿ ಬಸವಣ್ಣ ಪ್ರಮುಖರು. ಅವರ ಜೊತೆ ವಿವಿಧ ಸಮುದಾಯಗಳ ಶಿವಶರಣರಿದ್ದರು. ಅವರ ಹೋರಾಟ ಆಧ್ಯಾತ್ಮಿಕಕ್ಷೇತ್ರಕ್ಕೆ ಹೆಚ್ಚು ಸೀಮಿತವಾಗಿತ್ತು. ಈ ಹೋರಾಟ ಜನರಲ್ಲಿ ಅರಿವು ಮೂಡಿಸಿತ್ತು. ಇಂತಹ ಅರಿವನ್ನು ಅನೇಕ ನಾಯಕರು ಮೂಡಿಸಿದ್ದಾರೆ. ಮಹಾತ್ಮ ಗಾಂಧೀಜಿ ಸಹ ಅಸ್ಪೃಶ್ಯತೆಯ ವಿರುದ್ಧ ಬಹು ದೊಡ್ಡ ಹೋರಾಟ ನಡೆಸಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ 1935ರಲ್ಲಿ 'ಡಿಪ್ರೆಸ್ಡ್ ಕ್ಲಾಸಸ್ ಕಾನ್ಫರೆನ್ಸ್' (ದಲಿತ ಸಮ್ಮೇಳನ) ಸಂಘಟಿಸಿದರು. ಅಸ್ಪೃಶ್ಯಸಮಾಜಕ್ಕೆ ಈ ಸಮಾವೇಶ ಹೊಸ ದಿಕ್ಸೂಚಿಯಾಯಿತು. ಶೋಷಿತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಬೇಕೇ ಹೊರತು ಅದನ್ನು ಬೇಡಿ ಪಡೆಯಬಾರದು ಎಂಬ ಸಂದೇಶವನ್ನು ಈ ಸಮಾವೇಶ ನೀಡಿತು. ಹೀಗೆ ಜನರ ಚಿಂತನಾ ದಿಕ್ಕನ್ನು ಬದಲಾಯಿಸಿದ ಮಹಾನ್ ವ್ಯಕ್ತಿ ಡಾ. ಅಂಬೇಡ್ಕರ್. ಅವರು 1891 ಏಪ್ರಿಲ್ 14ರಂದು ರತ್ನಗಿರಿ ಜಿಲ್ಲೆ ಅಂಬಾವಾಡೆಯಲ್ಲಿ ಜನಿಸಿದರು. ಅವರ ತಂದೆ ಭೀಮರಾವ್ ರಾಮಜಿ. ತಾಯಿ ಭೀಮಾಬಾಯಿ. ಬೇಗ ತಾಯಿಯನ್ನು ಕಳೆದುಕೊಂಡ ಡಾ. ಅಂಬೇಡ್ಕರ್ ತಮ್ಮ ಸ್ವಂತ ಶಕ್ತಿಯಿಂದ ಮೇಲೆ ಬಂದವರು. ಹಾಗೇ ಮೇಲೆ ಬಂದರೂ ತಾವು ಹುಟ್ಟಿದ ಸಮಾಜವನ್ನು ಮರೆಯದೆ ಅದಕ್ಕೆ ಅಪರೂಪದ ಸೇವೆ ಸಲ್ಲಿಸಿದವರು. ಡಾ. ಬಿ.ಆರ್. ಅಂಬೇಡ್ಕರ್ ತುಳಿತಕ್ಕೊಳಗಾದ ವಿಶ್ವದ ಎಲ್ಲಾ ಜನಾಂಗಗಳಿಗೂ ಪ್ರೇರಣೆಯಾಗಿದ್ದಾರೆ. ಅವರು ಭಾರತಕ್ಕೆ ಕೊಟ್ಟಿರುವ 'ಭಾರತ ಸಂವಿಧಾನ' ನಮ್ಮ ಪವಿತ್ರ ಗ್ರಂಥಗಳಲ್ಲೊಂದು. ⌘





ಸಂಪಾದಕರ ವಾಣಿ

**ಅಂಬಿಕಾ ಎಂ ಹುಲಿನಾಯ್ಕರ್**
ಆಡಳಿತಾಧಿಕಾರಿ,
ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು

# ತಾಯಂದಿರಿಗೆ ನಮನ

'ದೇವರು ಎಲ್ಲೆಲ್ಲೂ ಇರಲು ಸಾಧ್ಯವಾಗದ ಕಾರಣ ತಾಯಿಯನ್ನು ಸೃಷ್ಟಿಸಿದ್ದಾನೆ' ಎಂಬುದು ಯಹೂದಿಗಳ ಜನಪ್ರಿಯ ಗಾದೆ ಮಾತು. ಈ ಮಾತನ್ನು ಎಲ್ಲರೂ ಮನಸಾರೆ ಒಪ್ಪುತ್ತಾರೆ. ತಾಯಿಯ ಪ್ರೀತಿಯನ್ನು ಸವಿಯದ ವ್ಯಕ್ತಿ ತುಂಬಾ ಅಪರೂಪ ಅಥವಾ ಇಲ್ಲವೇ ಇಲ್ಲ ಎಂದರೆ ತಪ್ಪಿಲ್ಲ. ಊರಿಗೆ ಸರದಾರನಾದರೂ ಅವನು ತಾಯಿಗೆ ಮಗ ಮಾತ್ರ ಎಂದು ನಮ್ಮ ಜನಪದರು ಬಹಳ ಹಿಂದೆಯೇ ಹೇಳಿದ್ದಾರೆ. ವ್ಯಕ್ತಿ ತನ್ನ ವಯಸ್ಸನ್ನು ಮರೆಯಬೇಕಾದರೆ ಅವನು ಕನಸಿನ ಮೂಲಕವಾದರೂ ತಾಯಿಯ ಮಡಿಲು ಸೇರಬೇಕಾಗುತ್ತದೆ. ಈ ಮಾತುಗಳನ್ನು ನಾನಿಲ್ಲಿ ಪ್ರಸ್ತಾಪಿಸಲು ನನಗೆ ಪ್ರೇರಣೆ ದೊರಕಿದ್ದು, ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ತಾಯಿ, ಶತಾಯುಷಿ ಶ್ರೀಮತಿ ಹೀರಾಬೆನ್ ಅವರು ಡಿಸೆಂಬರ್ 30ರಂದು ಅಹಮದಾಬಾದ್‌ನ ಯು.ಎಸ್. ಮೆಹ್ತಾ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಅಂಡ್ ರಿಸರ್ಚ್ ಸೆಂಟರ್ ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದ ಸಂದರ್ಭದಲ್ಲಿ ಎನ್ನಬಹುದು. ಆ ಮಹಾತಾಯಿಗೆ ಭಕ್ತಿಪೂರ್ವಕವಾದ ನಮನಗಳು. ಅವರ ಆತ್ಮಕ್ಕೆ ಶಾಂತಿ ದೊರೆಯಲಿ.

ಪೂಜ್ಯಹೀರಾಬೆನ್ ಅವರದು ಹಿರಿಯ ಜೀವ. ಜೂನ್ 18ರಂದು ಅವರ ಶತಮಾನೋತ್ಸವವನ್ನು ಆಚರಿಸಲಾಗಿತ್ತು. ಪ್ರಧಾನಿಯ ತಾಯಿಯಾಗಿದ್ದರೂ ಅವರು ಕೊನೆಯ ಮಗ ಪಂಕಜ್‌ಬಾಯಿ ಮನೆಯಲ್ಲಿ ಉಳಿದುಕೊಂಡು ಸರಳ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದರು. ಅವರಿಗೆ ಐವರು ಪುತ್ರರು. ಮೊದಲನೆಯವರೇ ಶ್ರೀ ನರೇಂದ್ರ ಮೋದಿ, ಸೋಮಬಾಯಿ, ಅಮೃತಬಾಯಿ, ಪ್ರಹ್ಲಾದಬಾಯಿ ಮತ್ತು ಪಂಕಜ್‌ಬಾಯಿ. ವಾಸಂತಿಬೆನ್ ಏಕೈಕ ಪುತ್ರಿ.

ಪ್ರಧಾನಮಂತ್ರಿಗಳು ತಮ್ಮ ತಾಯಿಯ ನಿಧನವಾರ್ತೆ ಕೇಳಿದ ತಕ್ಷಣ ಅಹಮದಾಬಾದ್‌ಗೆ ಧಾವಿಸಿದರು. ತಾಯಿಯ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ ಅವರ ಅಂತಿಮ ಯಾತ್ರೆಗೆ ಹೆಗಲು ಕೊಟ್ಟರು. ಈ ಒಂದು ಕೆಲಸದಿಂದ ಪ್ರಧಾನ ಮಂತ್ರಿಗಳು ವಿಶ್ವದಲ್ಲಿ ತಾಯಿಗಿಂತ ಶ್ರೇಷ್ಠ ವಸ್ತು ಮತ್ತೊಂದಿಲ್ಲ ಎಂಬುದನ್ನು ನಿರೂಪಿಸಿದರು.

ಶತಾಯುಷಿ ಹೀರಾ ಬೆನ್ ಅವರು ಪ್ರಧಾನ ಮಂತ್ರಿಗಳೇ ಹೇಳುವಂತೆ 'ಆದರ್ಶತಾಯಿ'ಯಾಗಿದ್ದರು. ಆರ್ಥಿಕವಾಗಿ ಪ್ರಬಲವಲ್ಲದ ಕುಟುಂಬವೊಂದರ ಗೃಹಿಣಿಯಾಗಿದ್ದ ಹೀರಾ ಬೆನ್ ಅವರಿಗೆ ಆರು ಜನ ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. ಅವರು ತಮ್ಮ ಸಂಸಾರಕ್ಕಾಗಿ ಬಹು ದೊಡ್ಡ ತ್ಯಾಗ ಮಾಡಿರುತ್ತಾರೆ. ಅವರು ಹೆಗ್ಗಳಿಕೆ ಎಂಬಂತೆ ಈ ಕೆಲಸ ಮಾಡಿರುವುದಿಲ್ಲ. ಅದು ತಮ್ಮ ಕರ್ತವ್ಯವೆಂದು ಭಾವಿಸಿರುತ್ತಾರೆ. ಸುಸಂಸ್ಕೃತ ಚಿಂತನೆಯುಳ್ಳ ಆ ಕುಟುಂಬದ ಪ್ರತಿಯೊಬ್ಬರೂ ಆ ಮಹಾಮಾತೆಯ ತ್ಯಾಗಕ್ಕೆ ಗೌರವಾರ್ಪಣೆ ಮಾಡಬೇಕಾದ ಅಗತ್ಯವಿರುತ್ತದೆ. ಪ್ರಧಾನ ಮಂತ್ರಿಗಳು ಹೇಳುವಂತೆ, ಪೂಜ್ಯಹೀರಾ ಬೆನ್ ಅವರು ನಿಷ್ಕಾಮ ಕರ್ಮಯೋಗಿ. ಜೀವನ ಮತ್ತು ಮೌಲ್ಯಗಳ ಸಂಕೇತ. ಅವರಲ್ಲಿ ತ್ರಿಮೂರ್ತಿಗಳನ್ನು ನೋಡಬಹುದು.

ಭಾರತೀಯ ಮತ್ತು ಪಾಶ್ಚಾತ್ಯ ಸಮಾಜಗಳ ತುಲನೆ ಮಾಡಿದಾಗ ನಮಗೆ ಮುಖ್ಯವಾಗಿ ಗೋಚರಿಸುವ ಪ್ರಮುಖ ಅಂಶವೆಂದರೆ; ಎರಡು ಸಮಾಜಗಳಲ್ಲಿರುವ ಕೌಟುಂಬಿಕ ವ್ಯವಸ್ಥೆ. ಪಾಶ್ಚಾತ್ಯ ಜಗತ್ತಿನಲ್ಲಿ ದಂಪತಿಗಳಲ್ಲಿ ವಿವಾಹ ವಿಚ್ಛೇದನ ಸಾಮಾನ್ಯ ಸಂಗತಿಯಾಗಿರುತ್ತದೆ. ಅಲ್ಲಿನ ಎಷ್ಟೋ ಮಕ್ಕಳಿಗೆ ಸಹಜವಾಗಿ ದೊರೆಯಬೇಕಾದ ತಾಯಿಯ ಪ್ರೀತಿ ದೊರಕಿರುವುದಿಲ್ಲ. ಆ ಮಕ್ಕಳು ಮಾನಸಿಕ ಯಾತನೆಗೆ ಗುರಿಯಾಗುತ್ತಾರೆ. ಮಾದಕದ್ರವ್ಯಗಳ ದಾಸರಾಗುತ್ತಾರೆ. ಶಾಲಾಶಿಕ್ಷಣದ ಕಾಲದಲ್ಲೇ ಸುಲಭವಾಗಿ ಸಿಗುವ ಬಂದೂಕಿನಿಂದ ಸಹಪಾಠಿಗಳನ್ನು ಕೊಲ್ಲುತ್ತಾರೆ. ಅಲ್ಲಿ ಮಕ್ಕಳ ಮಾನಸಿಕಸ್ಥಿತಿ ಅಧ್ಯಯನಕ್ಕೆ ಬಹುದೊಡ್ಡ ಸಂಪನ್ಮೂಲವನ್ನು ವೆಚ್ಚ ಮಾಡಲಾಗುತ್ತಿದೆ.



ಎಲ್ಲಮ್ಮ ರಂಗಪ್ಪ



ಹನುಮಂತಮ್ಮ

ಭಾರತದಲ್ಲಿ ಅಂತಹ ಪರಿಸ್ಥಿತಿಯಿಲ್ಲ. ಪ್ರತಿಯೊಬ್ಬ ತಾಯಿಯೂ ತನ್ನ ಬದುಕು ತನ್ನ ಮಗುವಿಗೆ ಮತ್ತು ಕುಟುಂಬಕ್ಕೆ ಮೀಸಲು ಎಂದೇ ಭಾವಿಸುತ್ತಾಳೆ. ಅನೇಕ ಕುಟುಂಬಗಳಲ್ಲಿ ಮಕ್ಕಳ ಬೆಳವಣಿಗೆಯಲ್ಲಿ ತಂದೆಗಿಂತ ತಾಯಿಯ ಕೊಡುಗೆ ಹೆಚ್ಚಿರುತ್ತದೆ. ಮಕ್ಕಳು ಯಾವಾಗಲೂ ತಾಯಿಯನ್ನೇ ಹೆಚ್ಚಾಗಿ ಅವಲಂಬಿಸಿರುತ್ತಾರೆ.

ಈಗ ನಾನು ನನ್ನ ತಾಯಿಯ ಕುರಿತು ಮಾತನಾಡುವುದಿಲ್ಲ. ನಮ್ಮನ್ನು ಬೆಳೆಸುವಲ್ಲಿ ಅವರ ಕೊಡುಗೆ ಅಸಾಧಾರಣವಾಗಿದೆ. ಅದನ್ನು ಮತ್ತೊಂದು ಸಂದರ್ಭದಲ್ಲಿ ಹೇಳುತ್ತೇನೆ. ಈಗ ನಾನು ಇಬ್ಬರು 'ಮಹಾ ತಾಯಂದಿರುಗಳ' ಬಗ್ಗೆ ಹೇಳುತ್ತೇನೆ. ಒಬ್ಬರು, ನನ್ನ ತಾಯಿಯ ತಾಯಿ ನನ್ನಜ್ಜಿ ಹನುಮಂತಮ್ಮ. ಮತ್ತೊಬ್ಬರು, ನನ್ನ ತಂದೆಯ ತಾಯಿ ನನ್ನಜ್ಜಿ ಎಲ್ಲಮ್ಮ ರಂಗಪ್ಪ. ಈ ಎರಡು ಚೇತನಗಳು ಈಗ ನಮ್ಮೊಂದಿಗೆ ಇಲ್ಲ. ಆದರೆ ಅವರ ನೆನಪು ಅಚ್ಚಳಿಯದೇ ನನ್ನ ಹೃದಯದಲ್ಲಿ ನೆಲೆಸಿದೆ.

ನನ್ನ ಅಮ್ಮನ ತಾಯಿ ಹನುಮಂತಮ್ಮ ಅವರ ಪತಿ ಅಂದರೆ ನನ್ನಜ್ಜ ಷಣ್ಮುಖಪ್ಪ ಅವರು ಕೇಂದ್ರ ಸರ್ಕಾರದ ಹುದ್ದೆಯಲ್ಲಿದ್ದರು. ಆರ್ಥಿಕವಾಗಿ ಅವರಿಗೆ ಅಂತಹ ತೊಂದರೆಯಿರಲಿಲ್ಲ. ನಾಲಕ್ಕು ಮಕ್ಕಳಿಗೂ ಸೂಕ್ತ ವಿದ್ಯೆ ಕೊಡಿಸಲು ಅವರಿಗೆ ತೊಂದರೆಯಿರಲಿಲ್ಲ. ಆದರೆ ನಮ್ಮಜ್ಜಿಯೇ ಕ್ಯಾನ್ಸರ್ ಕಾಯಿಲೆಗೆ ಬಲಿಯಾದರು. ಬಹುದೊಡ್ಡ ಹೋರಾಟ ಮಾಡಿ ಕಾಯಿಲೆಯಿಂದ ಹೊರಬಂದರು. ಅವರ ಸಂಕಲ್ಪ ಶಕ್ತಿಯ ವಿಚಾರದಲ್ಲಿ ನನಗೆ ಯಾವಾಗಲೂ ಅಭಿಮಾನವಿದೆ. ಮಗ-ಸೊಸೆ ತೀರಿಹೋದಾಗ ಮೊಮ್ಮಕ್ಕಳನ್ನು ಕಾಪಾಡಿದ ವಿಶಾಲ ಹೃದಯವದು. ಅವರು ಬದುಕನ್ನು ಕಂಡುಕೊಂಡ ರೀತಿ ಮತ್ತು ಸದಾ ಕಷ್ಟಗಳಿಗೆ ಹೆದರದೇ ಹೋರಾಡುವ ಛಲ ಅವರನ್ನು ಇತರರಿಗಿಂತ ಭಿನ್ನವಾಗಿಸಿದೆ.

ಮತ್ತೊಬ್ಬ ಮಹಾತಾಯಿ ನನ್ನ ತಂದೆಯ ತಾಯಿ ಅರ್ಥಾತ್ ನನ್ನಜ್ಜಿ. ನವಲಗುಂದ ತಾಲ್ಲೂಕಿನ ತುಪ್ಪದ ಕುರುಹಟ್ಟಿಯಲ್ಲಿದ್ದ ಅವರು ತಮ್ಮ ಐವರು ಮಕ್ಕಳನ್ನು ಬೆಳೆಸಿ ಸುಸಂಸ್ಕೃತರನ್ನಾಗಿಸಿದ ಕತೆಯಿದೆಯಲ್ಲ ಅದು ಯಾವುದೇ ಕಾದಂಬರಿಗಿಂತ ಕಡಿಮೆ ಆಸಕ್ತಿ ಹುಟ್ಟಿಸುವ ಕತೆಯಲ್ಲ. ಅವರದು ದೊಡ್ಡ ಜಮೀನುದಾರರ ಕುಟುಂಬವಲ್ಲ. ಬಹಳ ಸಾಮಾನ್ಯ ಕೃಷಿ ಕುಟುಂಬ. ತಾವು ಸದಾ ಕೆಲಸ ಮಾಡುತ್ತಾ ಕಾಯಕ ಸಂಸ್ಕೃತಿಯನ್ನು ಬಿತ್ತಿದ ಮಹಾನ್ ವ್ಯಕ್ತಿ ಅವರು. ಅವರಂತೆಯೇ ನನ್ನ ಅಪ್ಪಾಜಿ ಡಾ. ಹುಲಿನಾಯ್ಕರ್ ಅವರು ಸದಾ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ನಿಷ್ಕಾಮ ಕರ್ಮಯೋಗ ಎಲ್ಲಕ್ಕೂ ಪರಿಹಾರವೆಂದು ಕಂಡುಕೊಂಡ ಹಿರಿಯ ತಾಯಿ ಅವರು. ದೈವಭಕ್ತಿ ಅವರಿಗೆ ಮಾನಸಿಕಶಕ್ತಿ ಕೊಟ್ಟಿರಬಹುದು.

ಇಬ್ಬರಿಗೂ ವೈಯಕ್ತಿಕವಾಗಿ ಏನೂ ಬೇಕಾಗಿರಲಿಲ್ಲ. ತಮ್ಮ ಕುಟುಂಬ ಮತ್ತು ಮಕ್ಕಳ ಶ್ರೇಯಸ್ಸು ಮಾತ್ರ ಅವರ ಕಣ್ಮುಂದೆಯಿದ್ದ ಗುರಿಯಾಗಿದ್ದವು. ಇಂತಹ ತಾಯಂದಿರು ನಮ್ಮ ಪ್ರತಿ ಕುಟುಂಬದಲ್ಲೂ ಇದ್ದಾರೆ. ಅವರುಗಳ ತ್ಯಾಗದ ಫಲವಾಗಿ ಭಾರತೀಯ ಸಮಾಜ ಸಂಘಟಿತವಾಗಿದೆ. ಇಲ್ಲಿನ ಮಕ್ಕಳಿಗೆ, ಬಂಧು-ಬಾಂಧವರಿಗೆ ರಕ್ಷಣೆ ಮತ್ತು ಪ್ರೇರಣೆ ದೊರೆಯುತ್ತಿದೆ. ಇಂತಹ ಮಹಾಮಾತೆಯರಿಗೆ ನಾಡಿನ ಎಲ್ಲಾ ಜನರ ಪರವಾಗಿ ಹಾರ್ದಿಕ ಅಭಿನಂದನೆಗಳು ಮತ್ತು ನಮಸ್ಕಾರಗಳು.

⌘

# ತುಮಕೂರು ವಿಶ್ವವಿದ್ಯಾನಿಲಯ ನೆಲೆಯೂರಲು ಕಾರಣೀಕರ್ತರು

ತುಮಕೂರು ವಿಶ್ವವಿದ್ಯಾನಿಲಯದ ಸಂಸ್ಥಾಪಕ ಕುಲಪತಿ ಡಾ. ಓ. ಅನಂತರಾಮಯ್ಯ(78) ಅವರು ಶನಿವಾರ (ಜನವರಿ 8) ರಾತ್ರಿ ಬೆಂಗಳೂರಿನಲ್ಲಿ ನಿಧನರಾದರು. ಅವರ ಹುಟ್ಟೂರಾದ ಕೊರಟಗೆರೆಗೆ ಮೃತದೇಹ ಸಾಗಿಸುವ ಮಾರ್ಗ ಮಧ್ಯೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸಾರ್ವಜನಿಕರ ದರ್ಶನಕ್ಕೆ ಪಾರ್ಥಿವ ಶರೀರವನ್ನಿಡಲಾಗಿತ್ತು. ವಿಧಾನ ಪರಿಷತ್ ಮಾಜಿ ಸದಸ್ಯರೂ ಶ್ರೀದೇವಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರೂ ಆದ ಡಾ. ಹುಲಿನಾಯ್ಕರ್ ಅವರು ಪ್ರೊ. ಓ.ಅನಂತರಾಮಯ್ಯ ಅವರ ಪಾರ್ಥಿವ ಶರೀರಕ್ಕೆ ಗೌರವ ನಮನಗಳನ್ನು ಅರ್ಪಿಸಿ "ತುಮಕೂರು ವಿಶ್ವವಿದ್ಯಾನಿಲಯದ ಮೊದಲ ಕುಲಪತಿ ಪ್ರೊ. ಓ. ಅನಂತರಾಮಯ್ಯ ಅವರು ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಸೊರಗಿದ್ದ ಕಾಲದಲ್ಲಿ ಈ ವಿಶ್ವವಿದ್ಯಾನಿಲಯದ ಮೊದಲ ಕುಲಪತಿಯಾದರು. ಎಲ್ಲರೊಂದಿಗೆ ವಿಶ್ವಾಸದಿಂದ ನಡೆದುಕೊಂಡು ಎಂ.ಜಿ ರಸ್ತೆಯ ಅಂಬೇಡ್ಕರ್ ಭವನವನ್ನು ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯನ್ನಾಗಿ ಮಾಡಿಕೊಂಡು ಖಾಸಗಿ ಕಾಲೇಜುಗಳಲ್ಲಿಯೇ ವಿವಿಧ ಕೋರ್ಸ್‌ಗಳನ್ನು ಆರಂಭಿಸಿದ್ದರು. ನಿರಂತರ ಹೋರಾಟ ನಡೆಸಿ ವಿಶ್ವವಿದ್ಯಾನಿಲಯಕ್ಕೆ ಭೂಮಿ ದೊರಕಿಸಲು ಪ್ರಯತ್ನಿಸಿದ್ದರು. ಈಗಿನ ಬಿದರೆಕಟ್ಟೆ ಪ್ರದೇಶ ಸಹ ಅವರು ಗುರುತಿಸಿದ ಜಾಗವೇ ಆಗಿದೆ. ವಿಶ್ವವಿದ್ಯಾನಿಲಯದ ಬೆಳವಣಿಗೆಯಲ್ಲಿ ಅವರದು ಪ್ರಮುಖ ಪಾತ್ರ. ವಿಶ್ವವಿದ್ಯಾನಿಲಯ ಸಾರ್ವಜನಿಕರನ್ನು ಒಳಗೊಳ್ಳಬೇಕು ಎಂಬ ಉದ್ದೇಶದಿಂದಲೇ ಸಾರ್ವಜನಿಕರಿಂದಲೇ ವಿಶ್ವವಿದ್ಯಾನಿಲಯದ ಚಿಹ್ನೆ ಮಾಡಿಸಿದ್ದರು. ಅದಕ್ಕೆ ಸರಕಾರದ ಒಪ್ಪಿಗೆ ದೊರೆಯುವಂತೆ ಮಾಡಿದ್ದರು. ತುಮಕೂರು ವಿಶ್ವವಿದ್ಯಾನಿಲಯವನ್ನು ಜನಸಾಮಾನ್ಯರ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಿದ ಕೀರ್ತಿ ಡಾ. ಓ. ಅನಂತರಾಮಯ್ಯ ಅವರಿಗೆ ಸಲ್ಲುತ್ತದೆ" ಎಂದರು. ⌘



ಡಾ. ಓ. ಅನಂತರಾಮಯ್ಯ

**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ಭಾರತದ ಉನ್ನತ ಶಿಕ್ಷಣಕ್ಷೇತ್ರಕ್ಕೆ ವಿದೇಶಿ ವಿವಿಗಳ ಪ್ರವೇಶ ಲಾಭವೋ ಅಥವಾ ನಷ್ಟವೋ!

ಮನದ ಮಾತು



**ಡಾ. ರಮಣ ಎಂ ಹುಲಿನಾಯ್ಕರ್**
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

**ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ, 2022ರಲ್ಲಿ ಸುಮಾರು ಹದಿಮೂರುಲಕ್ಷ ಭಾರತೀಯ ವಿದ್ಯಾರ್ಥಿಗಳು ವಿದೇಶದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಐದು ಶತಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಕಳೆದುಕೊಂಡಿದ್ದೇವೆ.**

ವಿಶ್ವವಿದ್ಯಾಲಯ ಧನಸಹಾಯ ಆಯೋಗವು (UGC) ವಿದೇಶಿ ವಿಶ್ವವಿದ್ಯಾಲಯಗಳು ತಮ್ಮ ಶಿಕ್ಷಣ ಸಂಸ್ಥೆಗಳನ್ನು ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ಕರಡು ನಿಯಮಾವಳಿಗಳನ್ನು ಪ್ರಕಟಿಸಿದೆ. ವಿದೇಶಿ ಶಿಕ್ಷಣ ಸಂಸ್ಥೆಗಳು ಕ್ಯಾಂಪಸ್‌ಗಳ ಸ್ಥಾಪನೆ, ಅವುಗಳ ಸ್ವಾಯತ್ತತೆ, ಆಡಳಿತ ಮತ್ತಿತರ ವಿಷಯಗಳನ್ನು ತಿಳಿದುಕೊಳ್ಳಲು ಈ ಪ್ರಕಟಣೆ ಸಹಾಯ ಮಾಡುತ್ತದೆ.


ಒಇಸಿಡಿ ದೇಶಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳ ಪೈಕಿ ಚೀನಾ (22%) ಮತ್ತು ಭಾರತ (10%) ಹೆಚ್ಚಿನ ಪಾಲನ್ನು ಹೊಂದಿವೆ ಎಂದು ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯ (O.E.C.D.)(Organisation for Economic Cooperation & Development) ಅಂತರರಾಷ್ಟ್ರೀಯ ವಲಸೆ ಮಾದರಿಗಳ ವರದಿ ತಿಳಿಸಿದೆ. ಇದರ ಜೊತೆಗೆ ಆ ಎಲ್ಲಾ ವಿದೇಶಿ ವಿದ್ಯಾರ್ಥಿಗಳ ಪೈಕಿ ಬಹುತೇಕ ಮಂದಿ ಭಾರತೀಯರೇ ಆಗಿದ್ದಾರೆ. ಅವರೆಲ್ಲರೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ತಮ್ಮ ಆತಿಥೇಯ ದೇಶದಲ್ಲೇ ಉಳಿದುಕೊಳ್ಳುತ್ತಾರೆ. ಅಲ್ಲಿನ ಸ್ಥಳೀಯ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯುತ್ತಾರೆ. ಐಎನ್‌ಟಿಒ ವಿಶ್ವವಿದ್ಯಾಲಯದ (INTO University) ಸಹಭಾಗಿತ್ವದ ಅಧ್ಯಯನದ ಪ್ರಕಾರ, ವಿದೇಶಿ ವಿಶ್ವವಿದ್ಯಾಲಯಗಳ ಪದವಿಗಳಿಗಾಗಿ ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವ ಹತ್ತು ವಿದ್ಯಾರ್ಥಿಗಳಲ್ಲಿ ಎಂಟು ವಿದ್ಯಾರ್ಥಿಗಳು ಅದೇ ದೇಶದಲ್ಲಿ ಕೆಲಸ ಮತ್ತು ವೃತ್ತಿಯನ್ನು ಕಂಡುಕೊಂಡಿದ್ದಾರೆ.

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ, 2022ರಲ್ಲಿ ಸುಮಾರು ಹದಿಮೂರು ಲಕ್ಷ ಭಾರತೀಯ ವಿದ್ಯಾರ್ಥಿಗಳು ವಿದೇಶದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಐದು ಶತಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಕಳೆದುಕೊಂಡಿದ್ದೇವೆ.

'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020' ಭಾರತದಲ್ಲಿ ನೂರು ಉನ್ನತ ಜಾಗತಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಕಲ್ಪನೆಯನ್ನು ಉಲ್ಲೇಖಿಸಿದೆ. ಈ ಕ್ರಮವು ಭಾರತ ವಿಶ್ವಗುರುವಾಗಲು ಅಥವಾ ಶಿಕ್ಷಣಕ್ಕಾಗಿ ಜಾಗತಿಕ ತಾಣವಾಗುವ ಆಕಾಂಕ್ಷೆಯತ್ತ ಮಹತ್ವದ ಹೆಜ್ಜೆಯಾಗಬಹುದು. ಈ ಹೆಜ್ಜೆಯಿಂದ ಪ್ರಸ್ತುತ ವಿದೇಶದಲ್ಲಿ ಶಿಕ್ಷಣ ಪಡಯಬೇಕು ಎಂಬ ವ್ಯಾಮೋಹ ಮತ್ತು ವಿದೇಶಿ ವಿನಿಮಯದ ನಷ್ಟವನ್ನೂ ತಪ್ಪಿಸಬಹುದು. ಜೊತೆಗೆ ಸಾಗರೋತ್ತರ ವಿದ್ಯಾರ್ಥಿ ಅಥವಾ ವಿದೇಶಿ ವಿದ್ಯಾರ್ಥಿಗಳನ್ನು ಭಾರತದತ್ತ ಆಕರ್ಷಿಸಲು ಸಹಾಯವಾಗಬಹುದು. ಇದು ಭಾರತದ ಪ್ರಸ್ತುತ ಶಿಕ್ಷಣ ಸಂಸ್ಥೆಗಳ ನಡುವಿನ ಸ್ಪರ್ಧೆ ಮತ್ತು ಸಂಶೋಧನೆ ಹಾಗೂ ಅಧ್ಯಾಪಕರ ನಡುವಿನ ಸಂವಾದಗಳ ಸಹಭಾಗಿತ್ವವನ್ನು ಉತ್ತೇಜಿಸಲಿದೆ.

### ಕರಡು ನಿಯಮಗಳಲ್ಲಿನ ಪ್ರಕ್ರಿಯೆಯ ಪ್ರಮುಖ ಅಂಶಗಳು:

- ಶೈಕ್ಷಣಿಕ ಸಂಸ್ಥೆಗಳ ಜಾಗತಿಕ ಶ್ರೇಯಾಂಕಗಳ ಟಾಪ್ ಐನೂರರಲ್ಲಿರುವ ಯಾವುದೇ ವಿದೇಶಿ ವಿಶ್ವವಿದ್ಯಾಲಯವು ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು ಅರ್ಜಿ ಸಲ್ಲಿಸಬಹುದು.
- ವಿಶ್ವವಿದ್ಯಾಲಯದ ವಿಶ್ವಾಸಾರ್ಹತೆ,




ಕಾರ್ಯಕ್ರಮಗಳ ಅನುಷ್ಠಾನ, ಅವುಗಳ ಪರಿಣಾಮ ಮತ್ತು ಇತರೆ ಮಾನದಂಡಗಳ ಆಧಾರದ ಮೇಲೆ ಯುಜಿಸಿ ಸ್ಥಾಯಿ ಸಮಿತಿಯು ಶಿಫಾರಸು ಮಾಡಲಿದೆ.
- ಎರಡು ವರ್ಷಗಳಲ್ಲಿ ಕ್ಯಾಂಪಸ್ ಸ್ಥಾಪಿಸಲು ವಿದೇಶಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿದ ನಲವತ್ತೈದು ದಿನಗಳಲ್ಲಿ ಯುಜಿಸಿ ಅನುಮೋದನೆ ನೀಡುತ್ತದೆ.
- ಅನುಮೋದನೆಯ ಆರಂಭಿಕ ಅವಧಿಯು ಹತ್ತು ವರ್ಷಗಳಾಗಿದ್ದು, ಅದನ್ನು ನಂತರ ವಿಸ್ತರಿಸಬಹುದು.
- ವಿದೇಶಿ ವಿಶ್ವವಿದ್ಯಾಲಯವು ತನ್ನದೇ ಆದ ಶುಲ್ಕರಚನೆಯ ಸ್ವಾತಂತ್ರ್ಯ ಹೊಂದಿರುತ್ತದೆ. ಭಾರತದ ವಿದ್ಯಾಸಂಸ್ಥೆಗಳಲ್ಲಿ ಅಂದರೆ ಖಾಸಗಿ ಮತ್ತು ಸ್ವಾಯತ್ತ ವಿದ್ಯಾಸಂಸ್ಥೆಗಳಲ್ಲೂ ಶುಲ್ಕ ನಿಗದಿ ಮಾಡುವ ಸ್ವಾತಂತ್ರ್ಯ ಆ ಸಂಸ್ಥೆಗಳಿಗಿರುತ್ತದೆ. ಆದರೆ ಅದಕ್ಕೆ ಪೂರಕವಾಗಿ ಅವರು ನಿಯಮಾವಳಿ ಪಾಲಿಸಬೇಕಾಗುತ್ತದೆ.
- ವಿದೇಶಿ ವಿಶ್ವವಿದ್ಯಾನಿಲಯಗಳು ಈ ದೇಶದಲ್ಲಿ ಗಳಿಸಿದ ಸಂಪನ್ಮೂಲವನ್ನು ತಮ್ಮ ದೇಶಗಳಿಗೆ ಕಳುಹಿಸಲು ಅನುಮತಿ ಹೊಂದಿರುತ್ತವೆ.
- ಭಾರತ ಅಥವಾ ವಿದೇಶದಿಂದ ಯಾವುದೇ ಅಧ್ಯಾಪಕರನ್ನು ನೇಮಿಸಿಕೊಳ್ಳಲು ಈ ವಿಶ್ವವಿದ್ಯಾನಿಲಯ ಸ್ವಾತಂತ್ರ್ಯ ಹೊಂದಿದೆ.
- ಈ ವಿಶ್ವವಿದ್ಯಾನಿಲಯಗಳು ಯಾವುದೇ ಕಾರ್ಯಕ್ರಮ ಅಥವಾ ಕೋರ್ಸ್‌ಗಳನ್ನು ಆನ್‌ಲೈನ್ ಅಥವಾ ದೂರಶಿಕ್ಷಣದ ಮೂಲಕ ನೀಡುವಂತಿಲ್ಲ.
- ಭಾರತದಲ್ಲಿ ನೀಡಲಾಗುವ ಪದವಿಗಳು ತಮ್ಮ ಆಯಾಯ ದೇಶಗಳಲ್ಲಿ ನೀಡುವ ಪದವಿಗಳಿಗೆ ಸರಿಸಮಾನವಾಗಿರಬೇಕು.
- ಭಾರತದ ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ತರುವಂತಹ ಯಾವುದೇ ಪಠ್ಯಕ್ರಮಗಳನ್ನು ಈ ವಿಶ್ವವಿದ್ಯಾನಿಲಯ ಹೊಂದಿರಬಾರದು.

### ಕಾಳಜಿ ಏಕೆ?

- ಭಾರತದಲ್ಲಿ ಸಾಮಾಜಿಕ ಬದಲಾವಣೆ ತರುವ ಅಗತ್ಯವಿದ್ದು, ಕರಡಿನಲ್ಲಿ ಸಾಮಾಜಿಕ ನ್ಯಾಯದ ಕಳಕಳಿಗೆ ಅವಕಾಶವಿಲ್ಲದಾಗಿದೆ. ಮಹಿಳಾ ಮೀಸಲಾತಿ, ದಿವ್ಯಾಂಗರ ಸ್ಥಿತಿ, ಅಲ್ಪಸಂಖ್ಯಾತರ ಸ್ಥಿತಿ, ಆರ್ಥಿಕ ಸ್ಥಿತಿ ಮತ್ತು ಜಾತಿಯ ಆಧಾರದ ಮೇಲಿನ ಮೀಸಲಾತಿಗೆ ಕರಡು ನಿಯಮಗಳಲ್ಲಿ ಯಾವುದೇ ಅವಕಾಶ ಕಂಡುಬರುತ್ತಿಲ್ಲ.
- ಈ ವಿದೇಶಿ ವಿಶ್ವವಿದ್ಯಾನಿಲಯಗಳು ಶಿಕ್ಷಣದ ವೆಚ್ಚವನ್ನು ಹೆಚ್ಚಿಸುವ ಮೂಲಕ ಶ್ರೀಮಂತರಿಗೆ ಮಾತ್ರ ಸೇವೆ ನೀಡುತ್ತಿವೆ, ಅವರು ಮಾತ್ರ ಸರ್ವಶೇಷ್ಠರಾಗಿ ಬೆಳೆಯುತ್ತಾರೆ, ನಮ್ಮ ಜನಸಂಖ್ಯೆಯ 98%ರಷ್ಟು ಮಂದಿಗೆ ಈ ವಿಶ್ವವಿದ್ಯಾನಿಲಯಗಳು ತಲುಪುವುದಿಲ್ಲ ಎಂದು ವಿವಿಧ ಶಿಕ್ಷಣ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
- ಭಾರತೀಯ ವಿಶ್ವವಿದ್ಯಾನಿಲಯಗಳಿಂದ ವಿಶೇಷವಾಗಿ ಸರ್ಕಾರಿ ಸಂಸ್ಥೆಗಳಿಂದ ಪ್ರತಿಭಾವಂತ ಬೋಧನಾ ಮತ್ತು ಬೋಧನೇತರ ಸಿಬ್ಬಂದಿ ವಿದೇಶಿ ವಿಶ್ವವಿದ್ಯಾನಿಲಯಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುತ್ತಾರೆ.
- ಇತಿಹಾಸದಲ್ಲಿ ಮೊದಲ ಬಾರಿಗೆ ಶಿಕ್ಷಣ ಸಂಸ್ಥೆಗಳು ಲಾಭದಾಯಕವೆನಿಸುತ್ತವೆ.
- ಈವರೆಗೆ ಮಾತೃಸಂಸ್ಥೆ/ ದೇಶಕ್ಕೆ ಅನುಮತಿಸದ ಬಂಡವಾಳ ಮರುಪಾವತಿ ವ್ಯವಸ್ಥೆಗೆ ಈಗ ಅನುಮತಿ ಕೊಡಲಾಗಿದೆ.
- ವಿದೇಶಿ ವಿಶ್ವವಿದ್ಯಾನಿಲಯದಿಂದ ಭಾರತದಲ್ಲಿ ಕಾರ್ಪಸ್ ಫಂಡ್ ಅನ್ನು ನಿರ್ವಹಿಸುವ ಅಗತ್ಯವಿಲ್ಲ.

ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡಲು ಪ್ರಾಮುಖ್ಯತೆ ನೀಡುತ್ತಾರೆ. ಏಕೆಂದರೆ ಅವರ ಉದ್ಯೋಗ ಅಥವಾ ವೃತ್ತಿ ಜೀವನಕ್ಕಾಗಿ ಆ ದೇಶಗಳಲ್ಲಿ ನೆಲೆಸಲು ವಿದೇಶಿ ವಿಶ್ವವಿದ್ಯಾನಿಲಯಗಳು ನೀಡುವ ಪದವಿಗಳು ಸಹಾಯಕವಾಗುತ್ತವೆ. ವಿದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ಹತ್ತು ವಿದ್ಯಾರ್ಥಿಗಳ ಪೈಕಿ ಎಂಟು ವಿದ್ಯಾರ್ಥಿಗಳು ಆತಿಥೇಯ ರಾಷ್ಟ್ರದಲ್ಲಿ ನೆಲೆಸಿದ್ದಾರೆ ಎಂಬುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಇದರಿಂದ ಇಂತಹವರಿಗೆ ವಿದೇಶದಲ್ಲಿ ನೆಲೆಸಲು ಹೆಬ್ಬಾಗಿಲು ತೆರೆದಂತಾಗುತ್ತದೆ. ಹಾಗೆಂದ ಮಾತ್ರಕ್ಕೆ ಭಾರತೀಯ ವಿಶ್ವವಿದ್ಯಾನಿಲಯಗಳು ವಿದೇಶಿ ವಿಶ್ವವಿದ್ಯಾಲಯಗಳಿಗಿಂತ ಕಡಿಮೆ ಗುಣಮಟ್ಟ ಹೊಂದಿವೆ ಎಂದು ಪರಿಗಣಿಸಬೇಕಾಗಿಲ್ಲ. ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುವುದನ್ನು ವಿದ್ಯಾರ್ಥಿಗಳು ಪ್ರತಿಷ್ಠೆಯೆಂದು ಭಾವಿಸುತ್ತಾರೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ, ಭಾರತೀಯ ಶಿಕ್ಷಣ ವ್ಯವಸ್ಥೆಯ ಗುಣಮಟ್ಟ ಅಥವಾ ಮಾದರಿಯಲ್ಲಿ ಬದಲಾವಣೆಯ ಅಗತ್ಯವಿದ್ದಲ್ಲಿ, ಯುಜಿಸಿ ಅಥವಾ ಇತರೆ ನಿಯಂತ್ರಕ ಸಂಸ್ಥೆಗಳು ಮೊದಲು ಭಾರತೀಯ ವಿಶ್ವವಿದ್ಯಾನಿಲಯಗಳಿಗೆ ಹೊಂದಿಕೊಳ್ಳಲು ಅಥವಾ ಬದಲಾಯಿಸಲು ಅವಕಾಶ ನೀಡಬೇಕು. ನಂತರ ಕ್ರಮ ಕೈಗೊಳ್ಳಬಹುದು. ಆದರೆ, ಭಾರತೀಯ ಶಿಕ್ಷಣಕ್ಕೆ ಅಂತಾರಾಷ್ಟ್ರೀಯ ಮಾನ್ಯತೆ ಅಗತ್ಯವಿದ್ದರೂ, ಅದರ ಅಗತ್ಯ ಮತ್ತು ಅನುಷ್ಠಾನಕ್ಕೆ ಅನುಗುಣವಾಗಿ ಯಾವುದೇ ಸಂಶೋಧನೆ ಅಥವಾ ಅಧ್ಯಯನಗಳನ್ನು ನಡೆಸಲಾಗಿಲ್ಲ. ಭಾರತದಲ್ಲಿ ಶಿಕ್ಷಣಕ್ಕೆ ಮೀಸಲಿಟ್ಟ ಬಜೆಟ್ ಅನ್ನು ಹೆಚ್ಚಿಸುವ ಎನ್‌ಇಪಿ ಮಾರ್ಗಸೂಚಿಗಳನ್ನು ಜಾರಿಗೆ ತರಲು, ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಪರ್ಯಾಯ ಮಾರ್ಗಗಳನ್ನು ಕಂಡುಹಿಡಿಯಲು ಸರ್ಕಾರ ಕ್ರಮ ಕೈಗೊಳ್ಳಬೇಕು.

ಕಳಪೆ ಗುಣಮಟ್ಟದ ವಿಶ್ವವಿದ್ಯಾನಿಲಯ ಮತ್ತು ಕೋರ್ಸ್‌ಗಳ ಪ್ರವೇಶವನ್ನು ತಡೆಗಟ್ಟಲು, ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ವಿಶ್ವದ ಶ್ರೇಷ್ಠ ಐನೂರು ವಿಶ್ವವಿದ್ಯಾನಿಲಯಗಳಿಗೆ ಅವಕಾಶ ಕೊಡುವ ಬದಲು, ಪ್ರಾಥಮಿಕ ಹಂತದಲ್ಲಿ ನೂರು ವಿಶ್ವವಿದ್ಯಾನಿಲಯಗಳಿಗೆ (ಎನ್‌ಇಪಿ ಶಿಫಾರಸು ಮಾಡಿದಂತೆ) ಮಾತ್ರ ಅನುಮತಿ ನೀಡಬೇಕು. ಭಾರತದ ಬೋಧಕ ಸಿಬ್ಬಂದಿಯ ದೊಡ್ಡ ಪ್ರಮಾಣದ ವಲಸೆಯನ್ನು ತಡೆಗಟ್ಟಲು, ಕನಿಷ್ಠ ಶೇಕಡ 50ರಷ್ಟು ಸಿಬ್ಬಂದಿಯನ್ನು ವಿದೇಶಿ ವಿಶ್ವವಿದ್ಯಾನಿಲಯಗಳು ತಮ್ಮ ದೇಶದಿಂದ ಕರೆತರಬೇಕು. ಆ ವಿಶ್ವವಿದ್ಯಾನಿಲಯಗಳಿಗೆ ಮಾತೃದೇಶಕ್ಕೆ ಬಂಡವಾಳ ವಾಪಸಾತಿಗೆ ಅನುಮತಿ ನೀಡಬಾರದು. ಇದು ಭಾರತದಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಭಾರತದ ಆರ್ಥಿಕತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಸಾಮಾಜಿಕ ನ್ಯಾಯ ಮತ್ತು ಮೀಸಲಾತಿಯ ಕಾಳಜಿಯಲ್ಲಿ ಹೆಚ್ಚಿನ ಸ್ಪಷ್ಟತೆಯನ್ನೂ ನೀಡಬೇಕು.

ಭಾರತಕ್ಕೆ ವಿದೇಶಿ ವಿಶ್ವವಿದ್ಯಾನಿಲಯಗಳ ಪ್ರವೇಶವನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಶುಲ್ಕ ನಿಗದಿಪಡಿಸಲು, ಕಾರ್ಯಕ್ರಮಗಳ ಅನುಷ್ಠಾನ, ಪ್ರವೇಶಾತಿ ಅಥವಾ ಮತ್ತಿತರ ಕಾರ್ಯಗಳಿಗೆ ಸ್ವಾಯತ್ತತೆ ನೀಡುವ ಮೂಲಕ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸ್ಪರ್ಧಿಸಲು ಭಾರತೀಯ ವಿಶ್ವವಿದ್ಯಾನಿಲಯಗಳಿಗೆ ಸಮಾನ ಅವಕಾಶ ನೀಡಬೇಕು.

ಪ್ರಯೋಗಾರ್ಥವಾಗಿ ಮೊದಲಿಗೆ ವಿದೇಶಿ ವಿಶ್ವವಿದ್ಯಾನಿಲಯಗಳು ಭಾರತದ ವಿಶ್ವವಿದ್ಯಾನಿಲಯದ ಜೊತೆ ಸೂಕ್ತ ಒಪ್ಪಂದ ಮಾಡಿಕೊಂಡು ಭಾರತದ ಉನ್ನತ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸುವುದು ಉಚಿತ. ಅದರ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡಿ ವಿದೇಶಿ ವಿಶ್ವವಿದ್ಯಾನಿಲಯಗಳು ನೇರವಾಗಿ ಭಾರತದ ಉನ್ನತ ಶಿಕ್ಷಣಕ್ಷೇತ್ರ ಪ್ರವೇಶಿಸಲು ಅನುಮತಿಕೊಡಬಹುದು.

ಇಲ್ಲದಿದ್ದರೆ, ಭಾರತೀಯ ವಿಶ್ವವಿದ್ಯಾನಿಲಯಗಳು ಮತ್ತು ಭಾರತೀಯ ಶಿಕ್ಷಣ ವ್ಯವಸ್ಥೆ ಕುಸಿಯಲು ನಾವೇ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಅನುವಾದ: **ಬಿ.ಎಂ. ಸುನೀತಾ**

# ಮೂಲವ್ಯಾಧಿಗೆ ಲೇಸರ್ ಚಿಕಿತ್ಸೆ

ಮಾನವನ ಇತಿಹಾಸದಲ್ಲಿ ಮೂಲವ್ಯಾಧಿ ಕಾಯಿಲೆಗೆ ಸಾಕಷ್ಟು ದೊಡ್ಡ ಇತಿಹಾಸವಿದೆ.

ಮೂಲವ್ಯಾಧಿಗೆ ಅನೇಕ ಹೆಸರುಗಳಿವೆ. ಕನ್ನಡದಲ್ಲಿ ಇದನ್ನು 'ಮೊಳೆರೋಗ' ಎಂದು ಸಹ ಕರೆಯುತ್ತಾರೆ. ಇದಕ್ಕೆ Piles ಅಥವಾ Haemorrihoids ಎಂದೆಲ್ಲಾ ಕರೆಯುತ್ತಾರೆ. ಇದೇ ಭಾಗದಲ್ಲಿ ಕಾಣಿಸಿಕೊಳ್ಳುವ ಮತ್ತೆರಡು ಕಾಯಿಲೆಗಳನ್ನು ಜ್ಞಾಪಿಸಿಕೊಳ್ಳಬಹುದು. ಅವುಗಳೆಂದರೆ Fissure in anu ಹಾಗೂ Fistula. ಸಾಮಾನ್ಯವಾಗಿ ಪೇಶೆಂಟ್ ಕಾಯಿಲೆಗಳನ್ನು ಹೇಳುವಾಗ ಗೊಂದಲ ಮಾಡಿಕೊಂಡು ಒಂದಕ್ಕೆ ಮತ್ತೊಂದನ್ನು ಹೇಳುತ್ತಾರೆ.


ದೊಡ್ಡ ಕರುಳಿನ ಕೆಳಭಾಗದಲ್ಲಿ (Rectum) ಹಾಗೂ ಗುದದ್ವಾರದ Anus ಭಾಗಗಳಲ್ಲಿ ಮೂಲವ್ಯಾಧಿ ಕಾಣಿಸಿಕೊಳ್ಳುವುದು. ಮೂಲವ್ಯಾಧಿ ಎಂದರೆ ಗುದನಾಳದ ಅಭಿದಮನಿಗಳು ಹೊಸೆದ ಹಗ್ಗದಂತೆ ಉದಿಕೊಂಡಿರುವ ಸ್ಥಿತಿ. ಅಶುದ್ಧ ರಕ್ತನಾಳ ದಪ್ಪನಾಗಿ ಮಲ ಹೊರಹೋಗಲು ಅಡಚಣೆ ಮಾಡುತ್ತದೆ. ಇದರ ಪರಿಣಾಮ ಗುದದ್ವಾರದಿಂದ ನೋವಿಲ್ಲದ ರಕ್ತಸ್ರಾವವಾಗುತ್ತದೆ. ಈ ಸಂದರ್ಭದಲ್ಲಿ ಮಲದ ಜೊತೆ ಅಪಾರ ಪ್ರಮಾಣದಲ್ಲಿ ರಕ್ತವು ಹರಿದು ಹೋಗುತ್ತದೆ.

ಮೂಲವ್ಯಾಧಿಯ ಲಕ್ಷಣಗಳನ್ನು ಈ ರೀತಿ ಗುರುತಿಸಲಾಗಿದೆ. ಮಲವಿಸರ್ಜನೆಯಾದರೂ ಮಲ ತುಂಬಿರುವ ಅನುಭವ, ಮಲದ್ವಾರದ ಸುತ್ತಲೂ ತುರಿಕೆ ಮತ್ತು ಗುದದ್ವಾರ ಕೆಂಪಾಗುವುದು,

ಮೂಲವ್ಯಾಧಿಗಳನ್ನು ಸಾಮಾನ್ಯವಾಗಿ ಹಿಗ್ಗುವಿಕೆಯ ಸ್ಥಳ ಮತ್ತು ವ್ಯಾಪ್ತಿಯನ್ನು ಆಧರಿಸಿ ವರ್ಗೀಕರಿಸಲಾಗುತ್ತದೆ. ಆಂತರಿಕ ಮೂಲವ್ಯಾಧಿ ಬಾಚಣಿಗೆ ಹಾದಿಯಲ್ಲಿರುವ ಕೆಳಗಿನ ಹೆಮೊರೊಹಾಯಿಡ್ ಪ್ಲೆಕ್ಸಸ್‌ನಿಂದ ಹುಟ್ಟಿಕೊಳ್ಳುತ್ತದೆ ಮತ್ತು ಇದು ಲೋಳೆಪೊರೆಯಿಂದ ಆವೃತವಾಗಿರುತ್ತದೆ, ಆದರೆ ಬಾಹ್ಯ ಮೂಲವ್ಯಾಧಿ ಹಿಗ್ಗಿದ ಮತ್ತು ಹಿಗ್ಗಿದ ಎಪಿಥೀಲಿಯಂ ಅಡಿಯಲ್ಲಿ ಪ್ಲೆಕ್ಸಸ್ ರಕ್ತನಾಳವಾಗಿದೆ.

ಮಿಶ್ರ ಹೆಮೊರೊಯಿಡ್ಸ್ (ಆಂತರಿಕ ಮತ್ತು ಬಾಹ್ಯ) ಬಾಚಣಿಗೆ ಮಾರ್ಗದ ಮೇಲೆ ಮತ್ತು ಕೆಳಗೆ ಉದ್ಭವಿಸುತ್ತದೆ. ಪ್ರಾಯೋಗಿಕ ಉದ್ದೇಶಗಳಿಗಾಗಿ, ಗೋಲಿಘರ್ನ ವರ್ಗೀಕರಣ ಎಂದು ಕರೆಯಲ್ಪಡುವ ಮೂಲವ್ಯಾಧಿಗಳ ಗೋಚರತೆ ಮತ್ತು ಹಿಗ್ಗುವಿಕೆಯ ಆಧಾರದ ಮೇಲೆ ಆಂತರಿಕ ಮೂಲವ್ಯಾಧಿಗಳನ್ನು ಮತ್ತಷ್ಟು ಶ್ರೇಣೀಕರಿಸಲಾಗುತ್ತದೆ.

ಭಾರತದ ಜನಸಂಖ್ಯೆಯಲ್ಲಿ ಶೇಕಡ 36ರಷ್ಟು ಜನ ಮೂಲವ್ಯಾಧಿಯಿಂದ ಬಳಲುತ್ತಿದ್ದಾರೆ. ಅನೇಕರು ಕಮಾಂಡ್‌ಗಳ ಮೇಲೆ ಘಂಟೆಗಟ್ಟಲೆ ಸಮಯ ಕಳೆಯುತ್ತಾರೆ. ಮಲ ವಿಸರ್ಜನೆಯ ಸಂದರ್ಭದಲ್ಲಿ ಒತ್ತಡ ಹಾಕುವುದು, ಉಸಿರನ್ನು ಹಿಡಿದು ಒತ್ತಡ




ಹಾಕಿ ಕೆಲಸ ಮಾಡುವುದು, ಯಾವುದೇ ದೈಹಿಕ ಚಟುವಟಿಕೆಗಳನ್ನು ಮಾಡದಿರುವುದು ಮತ್ತು ವೈಜ್ಞಾನಿಕ ರೀತಿಯ ಆಹಾರಪದ್ಧತಿ ಅನುಸರಿಸದಿರುವುದು ಮೂಲವ್ಯಾಧಿ ರೋಗಕ್ಕೆ ಕೆಲವು ಕಾರಣಗಳಾಗಬಹುದು.

ಮೂಲವ್ಯಾಧಿಯಿಂದ ಆಗುವ ಮೊದಲ ದುಷ್ಪರಿಣಾಮವೆಂದರೆ ರಕ್ತಹೀನತೆ. ಆರೋಗ್ಯವಂತ ವ್ಯಕ್ತಿಯ ಲಕ್ಷಣವೆಂದರೆ ದೇಹದಲ್ಲಿ ಸರಿ ಪ್ರಮಾಣದಲ್ಲಿ ರಕ್ತವಿರುವುದಾಗಿರುತ್ತದೆ. ರಕ್ತಹೀನತೆಯಿಂದ ನಿಶ್ಶಕ್ತಿ. ಅನೇಕ ಕಾಯಿಲೆಗಳಿಗೆ ಆಹ್ವಾನ. ಕೊನೆಗೆ ರಕ್ತಹೀನತೆಯಿಂದ ಹೃದಯಾಘಾತವಾದರೂ ಆಶ್ಚರ್ಯವಿಲ್ಲ.

ಹಿಂದೆ ಮೂಲವ್ಯಾಧಿ ಕಾಣಿಸಿಕೊಂಡಾಗ ಹೊರರೋಗಿ ಘಟಕದಲ್ಲಿ ಕೊಡುವ ಔಷಧಗಳಿಗೆ ಈ ರೋಗವಾಸಿಯಾಗದಿದ್ದರೆ ಆಪರೇಷನ್ ಮಾಡುತ್ತಿದ್ದರು. ಆಪರೇಷನ್ ಸಹ ಸಾಕಷ್ಟು ವೈದ್ಯಕೀಯ ಪರಿಣತಿಯನ್ನು ಬಯಸುತ್ತಿತ್ತು. ಇದೇ ಕಾಲದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ 'ಮೂಲವ್ಯಾಧಿಗೆ ಆಪರೇಷನ್ ಇಲ್ಲದೆ ಚಿಕಿತ್ಸೆ' ಎಂಬ ನಾಮಫಲಕಗಳು ಎಲ್ಲೆಡೆ ಗೋಚರಿಸುತ್ತಿದ್ದವು. ಅವರು ಗುದದ್ವಾರದಲ್ಲಿ ಕಾಣಿಸಿಕೊಂಡಿದ್ದ ಹೊಸೆದ ಹಗ್ಗದಂತೆ ಉಬ್ಬಿರುವ ರಕ್ತನಾಳವನ್ನು ಕತ್ತರಿಸಿ ಹಾಕುತ್ತಿದ್ದರು. ಅವರು ಯಾವುದೇ ಅನಸ್ತೇಷಿಯಾ ಬಳಸದ ಕಾರಣ ಪೇಶೆಂಟ್‌ಗಳು ನೋವಿನಿಂದ ನರಳುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ಜೀವಾಪಾಯವಾಗಿರುವ ಸನ್ನಿವೇಶ ಸಹ ಕಂಡುಬರುತ್ತಿತ್ತು.

ನುರಿತ ಸರ್ಜನ್‌ಗಳು ಈ ಆಪರೇಷನ್‌ಗೆ ಸಾಕಷ್ಟು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಬಾಧಿತರಿಗೆ ಅನಸ್ತೇಷಿಯಾ ನೀಡಿ ಪೈಲ್ಸ್‌ನ ಆಪರೇಷನ್ ಪ್ರೊಟೋಕಾಲ್‌ನ್ನು ಅನುಸರಿಸುತ್ತಿದ್ದರು. ಅವರ ಗುದದ್ವಾರದ ಬಳಿ ತಮಗೆ ಬೇಕಾದಷ್ಟು ತೆರೆದುಕೊಂಡು ಅಶುದ್ಧ ರಕ್ತನಾಳದ ಭಾಗವನ್ನು ಹೊರತೆಗೆದು ಅದನ್ನು ಕಟ್ಟಿಕೊಂಡು ಗಂಟನ್ನು ಕತ್ತರಿಸುತ್ತಿದ್ದರು. ಒಮ್ಮೊಮ್ಮೆ ಅಶುದ್ಧ ರಕ್ತನಾಳದಲ್ಲಿ ಅನೇಕ ಗಂಟುಗಳಿದ್ದು ಅವನ್ನು ಶಸ್ತ್ರಚಿಕಿತ್ಸೆಯ ಮೂಲಕವೇ ತೆಗೆದು ಹಾಕಲಾಗುತ್ತಿತ್ತು. ಪೇಶೆಂಟ್ ಈ ಆಪರೇಷನ್ ಮುಗಿದು ಆರೇಳು ದಿನಗಳ ನಂತರ ಮನೆಗೆ ಹೋಗುತ್ತಿದ್ದ.

ಒಮ್ಮೆ ಮಲ ವಿಸರ್ಜನೆಗೆ ರಹದಾರಿ ದೊರೆತರೆ ಪೇಶೆಂಟ್‌ಗೆ ಆರಾಮವೆನಿಸುತ್ತಿತ್ತು. ಆಪರೇಷನ್ ಮೊದಲು ಮತ್ತು ನಂತರವೂ ಪೇಶೆಂಟ್‌ಗೆ ಅನೇಕ ಔಷಧಗಳನ್ನು ಕೊಡುತ್ತಿದ್ದರು. ಅದರಲ್ಲೂ ಪೇಶೆಂಟ್ ಮಧುಮೇಹ ಕಾಯಿಲೆಯಿಂದ ಬಳಲುತ್ತಿದ್ದರೆ ಅದನ್ನು ನಿಯಂತ್ರಣ ಮಾಡಿಕೊಂಡೇ ಆಪರೇಷನ್ ಮಾಡುತ್ತಿದ್ದರು. ಇಂತಹ ಆಪರೇಷನ್ ಸಂದರ್ಭದಲ್ಲಿ ಪೇಶೆಂಟ್‌ಗೆ ಮಾತ್ರವಲ್ಲ ಅವರ ಬಂಧುಗಳಿಗೆ ಆತಂಕ.

**ಮೂಲವ್ಯಾಧಿಗೆ ಸುಲಭ ಶಸ್ತ್ರಚಿಕಿತ್ಸೆ**

ಮೂಲವ್ಯಾಧಿ ಕಾಯಿಲೆ ಪ್ರಾರಂಭದ ಹಂತದಲ್ಲಿದ್ದರೆ ಅದಕ್ಕೆ ಕೊಡುವ ಚಿಕಿತ್ಸೆಯನ್ನು ಗ್ರೇಡ್ ಒಂದು ಎನ್ನುತ್ತಾರೆ. ಪ್ರಾರಂಭದಲ್ಲಿದ್ದ ಮೂಲವ್ಯಾಧಿಗೆ ಕೊಡುವ ಚಿಕಿತ್ಸೆ ಆಫೀಸ್ ಪ್ರೊಸೀಜರ್ ಅಥವಾ ಒ.ಪಿ.ಡಿ.ಯಲ್ಲಿ (ಹೊರರೋಗಿ ಘಟಕ) ಚಿಕಿತ್ಸೆ ನೀಡಲಾಗುತ್ತದೆ. ಅಂದರೆ ಬ್ಯಾಂಡಿಂಗ್ (Banding) ಸ್ಕ್ಲೀರೋಥೆರಪಿ (sclerotherapy) ಇವುಗಳಿಂದ ನೋವಿಲ್ಲದ ಚಿಕಿತ್ಸೆ ಪಡೆಯಬಹುದು.

ಮೂಲವ್ಯಾಧಿ ಕಾಣಿಸಿಕೊಂಡು ಸ್ವಲ್ಪ ದಿನಗಳು ಕಳೆದಿದ್ದರೆ ಅವರಿಗೆ ಗ್ರೇಡ್ ಮೂರು ಹಾಗೂ ನಾಲ್ಕರ ಹಂತದ ಕಾಯಿಲೆಗೆ ಚಿಕಿತ್ಸೆ ಅಂದರೆ ಆಪರೇಷನ್ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಆಪರೇಷನ್‌ನಿಂದ ಆಗುವ ನೋವನ್ನು ಪೇಶೆಂಟ್ ಅನುಭವಿಸಬೇಕು.

**ಅಭಿಮತ**



**ಡಾ. ಮನೋನ್ಮಣಿ ಎಂ.ಎಚ್.**
ಪ್ರಾಧ್ಯಾಪಕರು ಸರ್ಜರಿ ವಿಭಾಗ
(ಗ್ಯಾಸ್ಟ್ರೋಎಂಟಾರಲಜಿ)
ಶ್ರೀದೇವಿ ವೈದ್ಯಕೀಯ ಕಾಲೇಜು
ಮೊ: 97400 89758

ಅನೇಕರು ಮೂಲವ್ಯಾಧಿ ಕಾಯಿಲೆಯ ನೋವುಗಳನ್ನು ಅನುಭವಿಸಲು ಸಿದ್ಧರಿರುತ್ತಾರೆ, ಆದರೆ ಆಪರೇಷನ್‌ಗೆ ಮನಸ್ಸು ಮಾಡುವುದಿಲ್ಲ.

ಈಗ ವೈದ್ಯಕೀಯ ಲೋಕದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ಅಶುದ್ಧ ರಕ್ತನಾಳದಲ್ಲಿ ದಪ್ಪನಾಗಿ ಹೊಸೆದ ಹಗ್ಗದಂತೆ ಸುತ್ತಿಕೊಂಡು ಗಂಟಾಗಿರುವ ಭಾಗವನ್ನು ಅಲ್ಲಿಗೆ ಸರಿಯಾಗಿ ಲೇಸರ್ ಕಿರಣಗಳನ್ನು ಹಾಯಿಸಿ ಭಸ್ಮಗೊಳಿಸಲಾಗುತ್ತದೆ. ಇದಕ್ಕಾಗಿ ವಿಶಿಷ್ಟವಾದ ಲೇಸರ್ ಉಪಕರಣಗಳು ಬಂದಿವೆ. ಇದನ್ನು ಮಾಡಲು ವಿಶೇಷ ತರಬೇತಿ ಸಹ ಬೇಕು. ಲೇಸರ್ ಚಿಕಿತ್ಸೆ ಪಡೆದ ಪೇಶೆಂಟ್ ಹೆಚ್ಚು ದಿನ ಆಸ್ಪತ್ರೆಯಲ್ಲಿರುವ ಅಗತ್ಯವಿಲ್ಲ. ಲೇಸರ್ ಚಿಕಿತ್ಸೆ ಪಡೆದ ದಿನವೇ ಪೇಶೆಂಟ್ ಮನೆಗೆ ಹೋಗಬಹುದು. ಮನೆಯಲ್ಲೇ ಐದಾರು ದಿನ ವಿಶ್ರಾಂತಿ ಪಡೆದು ತಮ್ಮ ದಿನನಿತ್ಯದ ಕೆಲಸಕ್ಕೆ ಮರಳಬಹುದು. ಮೂಲವ್ಯಾಧಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಲೇಸರ್ ಚಿಕಿತ್ಸೆ ಕ್ರಾಂತಿಕಾರಕ ಬದಲಾವಣೆಯಾಗಿದೆ.

ಇತ್ತೀಚೆಗೆ ತುಮಕೂರಿನ ಶ್ರೀದೇವಿ ಆಸ್ಪತ್ರೆಯಲ್ಲಿ, ಮೂಲವ್ಯಾಧಿ ಕಾಯಿಲೆಯಿಂದ ಬಳಲುತ್ತಿರುವವರಿಗಾಗಿ ಲೇಸರ್ ಚಿಕಿತ್ಸೆಯ ಕ್ಯಾಂಪನ್ನು ಸಂಘಟಿಸಲಾಗಿತ್ತು. ಈ ಚಿಕಿತ್ಸೆ ಪಡೆದ ಅನೇಕರು ಅಂದೇ ಮನೆಗೆ ಹೋದರು. ಎಲ್ಲರೂ ಯಾವುದೇ ಸಮಸ್ಯೆಯಿಲ್ಲದೆ ಗುಣಮುಖರಾಗಿದ್ದಾರೆ.

ಬಂಧುಗಳೇ, ಮೂಲವ್ಯಾಧಿಗೆ ಪ್ರಮುಖ ಕಾರಣ ಮಲಬದ್ಧತೆ. ಅದರ ನಿವಾರಣೆಗೆ ಹೆಚ್ಚು ಗಮನ ಕೊಡಿ. ದಿನಕ್ಕೆ ಮೂರು ಲೀಟರ್ ನೀರನ್ನು ತಪ್ಪದೇ ಕುಡಿಯಿರಿ (ಗಮನಿಸಿ: ಆಲ್ಕೋಹಾಲ್ ಅಲ್ಲ). ಆಹಾರ ಸೇವನೆಯಲ್ಲಿ ಹೆಚ್ಚು ತರಕಾರಿಗೆ ಅದರಲ್ಲೂ ನಾರಿನ ಅಂಶವಿರುವುದಕ್ಕೆ ಆದ್ಯತೆ ಕೊಡಿ. ಧೂಮಪಾನ ಮತ್ತು ಮದ್ಯಪಾನಗಳನ್ನು ಮಾಡಬೇಡಿ. ಕಡ್ಡಾಯವಾಗಿ ದೈಹಿಕ ಚಟುವಟಿಕೆ ಮಾಡಿ.

ಇಷ್ಟಾದರೂ ಮೂಲವ್ಯಾಧಿ ಕಾಣಿಸಿಕೊಂಡರೆ ಹೆದರಬೇಡಿ. ತಜ್ಞವೈದ್ಯರನ್ನು ನೋಡಿ, ಸೂಕ್ತ ಚಿಕಿತ್ಸೆ ಪಡೆಯಿರಿ. ⌘

# ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ರಾಜ್ಯಮಟ್ಟದ ವೈದ್ಯಕೀಯ ವಿಜ್ಞಾನ ವಸ್ತುಪ್ರದರ್ಶನ

“ವೈದ್ಯಕೀಯ ಕ್ಷೇತ್ರದಲ್ಲಿ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ಉದ್ಯೋಗ ಪಡೆಯಲು ಇದರಲ್ಲಿ ಹೆಚ್ಚಿನ ಅವಕಾಶಗಳಿರುತ್ತವೆ. ಪ್ಯಾರಾ ಮೆಡಿಕಲ್ ವ್ಯಾಸಂಗಕ್ಕೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಯೋಗಾಲಯಗಳು, ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದು ಸಂತಸದ ವಿಚಾರ. ವೈದ್ಯಕೀಯ ಕಾಲೇಜಿನ ನೆರವು ಇಲ್ಲದ ಸಾಮಾನ್ಯ ಪ್ಯಾರಾ ಮೆಡಿಕಲ್ ಕಾಲೇಜ್‌ನಲ್ಲಿ ಈ ಸೌಲಭ್ಯ ದೊರೆಯುವುದಿಲ್ಲ. ಶ್ರೀದೇವಿ ಪ್ಯಾರಾ ಮೆಡಿಕಲ್ ವಿದ್ಯಾಸಂಸ್ಥೆಯವರು ಇಂದು ಏರ್ಪಡಿಸಿರುವ ವೈದ್ಯಕೀಯ ವಿಜ್ಞಾನ ವಸ್ತುಪ್ರದರ್ಶನವು ಅರಿವಿನ ದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿರುತ್ತದೆ. ಈ ವಸ್ತುಪ್ರದರ್ಶನದಲ್ಲಿ ವೈದ್ಯಕೀಯ ವಿಜ್ಞಾನದ ವಿವಿಧ ಪ್ರಾತ್ಯಕ್ಷಿಕೆಗಳನ್ನು ವೈಜ್ಞಾನಿಕ ಹಿನ್ನೆಲೆಯಿಂದ ತಯಾರಿಸಿರುವುದರಿಂದ ಸದರಿ ವಿದ್ಯಾರ್ಥಿಗಳ ಜ್ಞಾನಾರ್ಜನೆಯ ಜೊತೆ ತಾಂತ್ರಿಕ ಅರಿವು ಹೆಚ್ಚಾಗುತ್ತದೆ” ಎಂದು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಜಿ.ಚಂದ್ರಶೇಖರ್ ಅವರು 2023ರ ಜನವರಿ 4ರಂದು ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನ ಸಂಯುಕ್ತಾಶ್ರಯದಲ್ಲಿ 'ವೈದ್ಯಕೀಯ ವಿಜ್ಞಾನ ಪ್ರದರ್ಶನ'ವನ್ನು ಉದ್ಘಾಟನೆ ಮಾಡುತ್ತಾ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು “ಜ್ಞಾನಾರ್ಜನೆ ಜೊತೆಗೆ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸಿಕೊಂಡು ವೃತ್ತಿಪರ ಶಿಕ್ಷಣವನ್ನು ಪಡೆಯಬೇಕಾಗಿರುತ್ತದೆ. ಅದಕ್ಕಾಗಿ ಶ್ರೀದೇವಿ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗೆ ವೈದ್ಯಕೀಯ ಉಪಕರಣಗಳ ಉಪಯೋಗದ ಬಗ್ಗೆ ತಿಳಿಸಿಕೊಡಲಾಗುತ್ತಿದೆ. ಈ ಸಂಸ್ಥೆಯಲ್ಲಿ ಸಮುದಾಯ ಆರೋಗ್ಯ ಶಿಕ್ಷಣವನ್ನು ಪಡೆಯಲು ಪ್ರಾಯೋಗಿಕವಾಗಿ ಅನುಕೂಲಕರ ವಾತಾವರಣವನ್ನು ಕಲ್ಪಿಸಲಾಗಿದೆ. ಅದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು” ಎಂದರು.

ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ ಅವರು “ಈ ವಸ್ತುಪ್ರದರ್ಶನದಲ್ಲಿ ಡಿಪ್ಲೋಮ ಮತ್ತು



ಪದವಿ ವಿದ್ಯಾರ್ಥಿಗಳು ಸುಮಾರು 400ಕ್ಕೂ ಹೆಚ್ಚು ವೈದ್ಯಕೀಯ ವಿಜ್ಞಾನ ಪ್ರಾತ್ಯಕ್ಷಿಕೆಗಳನ್ನು ತಯಾರಿಸಿದ್ದು, ಸುಮಾರು 4500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಾರೆ. ಸದರಿ ವಸ್ತುಪ್ರದರ್ಶನದಲ್ಲಿ ಸಾರ್ವಜನಿಕರು, ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿ ಇದರ ಸದುಪಯೋಗಪಡೆದುಕೊಳ್ಳಬೇಕು” ಎಂದರು.

ಶ್ರೀದೇವಿ ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು “ಉತ್ತಮ ತಂತ್ರಜ್ಞರನ್ನು ಸಮಾಜಕ್ಕೆ ಕೊಡುಗೆ ನೀಡುವುದರಲ್ಲಿ ಶ್ರೀದೇವಿ ವೈದ್ಯಕೀಯ ಸಂಸ್ಥೆಯು ಗಣನೀಯ ಪಾತ್ರ ವಹಿಸುತ್ತಿದೆ. ಎಸ್.ಎಸ್.ಎಲ್.ಸಿ. ಮತ್ತುಪಿ.ಯು.ಸಿ. ಓದುತ್ತಿರುವ ಮಕ್ಕಳು ಮುಂದಿನ ತಮ್ಮ ವೈದ್ಯಕೀಯ ವೃತ್ತಿಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ವಿದ್ಯಾರ್ಥಿಗಳು' ಪ್ರಾಯೋಗಿಕ ನೈಪುಣ್ಯವನ್ನು ಪಡೆಯುವುದಕ್ಕಾಗಿ ವಿಶೇಷ ಸುಸಜ್ಜಿತ ಪ್ರಯೋಗಾಲಯಗಳನ್ನು ನಮ್ಮಲ್ಲಿ ಸಿದ್ಧ ಮಾಡಿದ್ದೇವೆ” ಎಂದರು. ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಡೀನ್ ಡಾ.ಎಂ.ಎಂ.ಅಂಗಡಿ ಅವರು “ಇಂದಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಬಹಳ ಬೇಡಿಕೆಯಿದ್ದು, ವೈದ್ಯರಾಗುವ ಅಥವಾ ಅರೆ ವೈದ್ಯರಾಗುವ ಕನಸು ಕಾಣುತ್ತಿರುವ ಮಕ್ಕಳಿಗೆ ಈ ವಸ್ತುಪ್ರದರ್ಶನವು ಬಹಳ ಉಪಯುಕ್ತವಾಗಿರುತ್ತದೆ” ಎಂದರು. ಆಡಳಿತಾಧಿಕಾರಿ ಟಿ.ವಿ.ಬ್ರಹ್ಮದೇವಯ್ಯ, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಹರೇಂದ್ರಕುಮಾರ್, ಪ್ಯಾರಾಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ ಉಪಸ್ಥಿತರಿದ್ದರು.

# ಬಾಹ್ಯಾಕಾಶ ಸಂಶೋಧನೆಗಳಿಂದ ದೇಶದ ಅಭಿವೃದ್ಧಿ ಸಾಧ್ಯ

"ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರವು ಅಭಿವೃದ್ಧಿಪಡಿಸಿರುವ ಸಂಶೋಧನೆಗಳು ಅತ್ಯಂತ ಮಿತವ್ಯಯದಲ್ಲಿ ಅತ್ಯುನ್ನತ ಸಾಧನೆಗಳಾಗಿವೆ. ಅವುಗಳನ್ನು ಇಂಜಿನಿಯರಿಂಗ್, ವೈದ್ಯಕೀಯ, ಕೃಷಿ, ಶಿಕ್ಷಣ ಮತ್ತು ಇತರೆ ಸಾಮಾಜಿಕ ಉಪಯುಕ್ತ ಕ್ಷೇತ್ರಗಳಲ್ಲಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ಆಯಾಯ ಕ್ಷೇತ್ರದ ತಜ್ಞರು, ಸಂಶೋಧಕರು ಮತ್ತು ವಿಜ್ಞಾನಿಗಳು ಈ ಕಡೆ ಗಮನಹರಿಸಬೇಕಾಗಿದೆ.




ಬಾಹ್ಯಾಕಾಶದಲ್ಲಿ ಅಮೆರಿಕ ಮತ್ತು ರಷ್ಯಾ ದೇಶಗಳು ಅದ್ಭುತ ಸಾಧನೆ ಮಾಡಿ ಚಂದ್ರಯಾನವನ್ನು ಕೈಗೊಂಡವು. 1957ರಲ್ಲಿ ನಮ್ಮ ದೇಶದ ವಿಜ್ಞಾನಿಗಳು ಬಾಹ್ಯಾಕಾಶ ಸಂಶೋಧನೆಯನ್ನು ದೇಶದ ಅಭಿವೃದ್ಧಿಗೆ ಬಳಸಲು ನಿರ್ಧರಿಸಿದರು. ಆಗ ಸ್ವಾತಂತ್ರ್ಯ ಬಂದು ಕೇವಲ ಹತ್ತು ವರ್ಷವಾಗಿತ್ತು. ಶಿಕ್ಷಣ, ಕೃಷಿ, ಆರೋಗ್ಯ ಹಾಗೂ ನೀರಾವರಿ ಸರ್ಕಾರದ ಆದ್ಯತಾ ಕಾರ್ಯಕ್ರಮಗಳಾಗಿದ್ದವು. ನಮ್ಮ ದೇಶದ ಮಹಾನ್ ವಿಜ್ಞಾನಿ ಡಾ. ವಿಕ್ರಂ ಸಾರಾಬಾಯ್ ಅವರು ಪ್ರಧಾನ ಮಂತ್ರಿ ಮತ್ತು ಸರ್ಕಾರವನ್ನು ಒಪ್ಪಿಸಿ ಬಾಹ್ಯಾಕಾಶ ಯೋಜನೆಗೆ ಸ್ಪಷ್ಟ ರೂಪಕೊಟ್ಟರು. ಇಂದು ಬಾಹ್ಯಾಕಾಶ ಸಂಶೋಧನೆಗಳಿಂದ ಮೀನುಗಾರಿಕೆ, ಹವಾಮಾನ ಮುನ್ನೆಚ್ಚರಿಕೆ, ಅರಣ್ಯನಾಶ, ಬೆಳೆ ನಮೂನೆ, ಆಸ್ತಿ-ಪಾಸ್ತಿಗಳ ರಕ್ಷಣೆಯಂತಹ ವಿಷಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಸಾಧ್ಯವಾಗಿವೆ. ಡಾ. ವಿಕ್ರಂ ಸಾರಾಬಾಯ್ ಅವರಂತಹ ವಿಜ್ಞಾನಿಗಳಾಗಬೇಕಾದರೆ ವಿದ್ಯಾರ್ಥಿಗಳು ಸೃಜನಶೀಲವಾದ ಅಂತಃಶಕ್ತಿ, ಪಂಚೇಂದ್ರಿಯಗಳ ಸಂವೇದನೆ, ಮುಕ್ತವಾದ ಚಿಂತನೆ ಮತ್ತು ನಿರಂತರವಾಗಿ ಕೆಲಸ ಮಾಡುವ ಚೈತನ್ಯ ಬೆಳೆಸಿಕೊಳ್ಳಬೇಕು" ಎಂದು ಇಸ್ರೋದ ಮಾಜಿ ಅಧ್ಯಕ್ಷರಾದ ವಿಜ್ಞಾನಿ ಡಾ.ಕೆ.ಎಸ್.ಕಿರಣ್‌ಕುಮಾರ್ ಅವರು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಆಶ್ರಯದಲ್ಲಿ ಮಾತನಾಡುತ್ತಾ ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ಮಾತನಾಡುತ್ತಾ "ಸಂಶೋಧನೆಗಳು ಕೇವಲ ಶೈಕ್ಷಣಿಕಕಾರ್ಯಕ್ಕೆ ಮಾತ್ರ ಸೀಮಿತಗೊಳ್ಳದೆ, ಸಾಮಾಜಿಕ ಉಪಯುಕ್ತತೆ ಮತ್ತು ಬದುಕಿನ ಪರಿವರ್ತನೆಗೆ ಕಾರಣವಾಗಬೇಕಾದ ಅಗತ್ಯವಿದೆ. ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ ಸಮುದಾಯ ಇಂತಹ ಉಪನ್ಯಾಸಗಳಿಂದ ಹೆಚ್ಚಿನ ಅರಿವು ಪಡೆದುಕೊಳ್ಳಬೇಕು. ಅದರಲ್ಲೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೌಶಲ ಅಗತ್ಯವಾಗಿರುತ್ತದೆ. ಅದಕ್ಕೆ ಡಾ. ಕಿರಣ್‌ಕುಮಾರ್ ಅವರಂತಹವರ ಅನುಭವವಾಣಿಯನ್ನು ಕೇಳಿ ಪ್ರೇರಣೆ ಪಡೆಯಬೇಕು" ಎಂದರು.

ವರದಿ: **ಎನ್.ಆನಂದ**

# ಸಮುದಾಯವನ್ನು ಪ್ರಬುದ್ಧವಾಗಿಸಿದ ಮಹಾನ್ ಸಂತ

◀◀ ...ಮೊದಲನೇ ಪುಟದಿಂದ

ಅಷ್ಟು ಕಾಲ ಅವರ ಪ್ರವಚನವನ್ನು ಯಾರು ಶ್ರದ್ಧೆಯಿಂದ ಕೇಳಿರುತ್ತಾರೋ ಅವರು ಖಂಡಿತ ತಮ್ಮ ಆಲೋಚನಾಮಾರ್ಗದಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾರೆ.

ಪೂಜ್ಯ ಶ್ರೀಸಿದ್ಧೇಶ್ವರ ಸ್ವಾಮಿಗಳನ್ನು ನಾನು ಮೊದಲಸಲ ಭೇಟಿಯಾದ ಸನ್ನಿವೇಶವನ್ನು ಈಗ ಜ್ಞಾಪಿಸಿಕೊಂಡರೆ ಮನಸ್ಸಿಗೆ ಮುದ ದೊರೆಯುತ್ತದೆ. ಎಪ್ಪತ್ತರ ದಶಕದಲ್ಲಿ ನಾನು ಹುಬ್ಬಳ್ಳಿಯ ಕೆ.ಎಂ.ಸಿ. ವೈದ್ಯಕೀಯ ಕಾಲೇಜಿನಲ್ಲಿ ಎಂ.ಎಸ್. ಮಾಡುತ್ತಿರಬೇಕಾದರೆ ಶ್ರೀಸಿದ್ಧೇಶ್ವರ ಸ್ವಾಮಿಗಳು ಹುಬ್ಬಳ್ಳಿಯ ಸಮೀಪದಲ್ಲಿದ್ದ ಮತ್ತೊಬ್ಬ ಮಹಾನ್ ಸಂತ ಪೂಜ್ಯ ಶ್ರೀಬಸವದೇವರ ಭೇಟಿಗೆ ಆಗಾಗ ಬರುತ್ತಿದ್ದರು. ಶ್ರೀಬಸವದೇವರು ಅವರಿಗೆ ಹುಬ್ಬಳ್ಳಿಯ ಶ್ರೀಸಿದ್ಧಾರೂಢರ ಹಾಗೂ ಗದುಗಿನ ಶ್ರೀಶಿವಾನಂದರ ಆಶೀರ್ವಾದವಿತ್ತು. ಶ್ರೀಬಸವದೇವರ ಅನೇಕ ಗುಣಗಳನ್ನು ಶ್ರೀಸಿದ್ಧೇಶ್ವರ ಸ್ವಾಮಿಗಳ ವ್ಯಕ್ತಿತ್ವದಲ್ಲೂ ಕಾಣಬಹುದು.

ಶ್ರೀಬಸವದೇವರು ಗದುಗಿನ ಶ್ರೀ ಶಿವಾನಂದರ ಅಂತರಂಗದ ಶಿಷ್ಯರು ಎಂದೇ ಖ್ಯಾತರಾಗಿದ್ದರು. ಇವರ ಜೊತೆ ಶ್ರೀಸಿದ್ಧೇಶ್ವರ ಸ್ವಾಮಿಗಳ ಗುರುಗಳಾದ 'ವೇದಾಂತ ಕೇಸರಿ' ಪೂಜ್ಯ ಶ್ರೀಮಲ್ಲಿಕಾರ್ಜುನಸ್ವಾಮಿಗಳಿದ್ದರು. ಗದುಗಿನ ಶ್ರೀಶಿವಾನಂದರು ಅಧ್ಯಾತ್ಮದಲ್ಲಿ ಆಸಕ್ತಿಯಿದ್ದ 250ಕ್ಕೂ ಹೆಚ್ಚಿನ ಅಧ್ಯಾತ್ಮಜಿಜ್ಞಾಸುಗಳಿಗೆ ದೀಕ್ಷೆ ಮತ್ತು ಪ್ರೇರಣೆ ಕೊಟ್ಟಿದ್ದರು. ಅಂತಹವರಲ್ಲಿ ವೇದಾಂತ ಕೇಸರಿ ಶ್ರೀಮಲ್ಲಿಕಾರ್ಜುನ ಸ್ವಾಮಿಗಳೂ ಒಬ್ಬರು. ಅವರು ಶ್ರೀಶಿವಾನಂದರ ಸಂದೇಶವನ್ನು ಸಾರಲು ವಿಜಯಪುರದಲ್ಲಿ 'ಜ್ಞಾನಯೋಗಾಶ್ರಮ'ವನ್ನು ಸ್ಥಾಪಿಸಿದ್ದರು. ಪೂಜ್ಯ ಶ್ರೀಮಲ್ಲಿಕಾರ್ಜುನಸ್ವಾಮಿಗಳ ಕಾರುಣ್ಯಶಿಶು ನಮ್ಮ ಶ್ರೀಸಿದ್ಧೇಶ್ವರ ಸ್ವಾಮಿಗಳು.

ಶ್ರೀಸಿದ್ಧೇಶ್ವರ ಸ್ವಾಮಿಗಳಿಗೆ ತಮ್ಮ ಗುರುಗಳ ಸಹಪಾಠಿಯಾದ ಶ್ರೀಬಸವದೇವರು ಅವರಲ್ಲಿ ಅತ್ಯಂತ ಪೂಜ್ಯ ಭಾವನೆಯಿತ್ತು. ಅದಕ್ಕೆ ಅನೇಕ ಕಾರಣಗಳಿವೆ. ಶ್ರೀಬಸವದೇವರು ಗದುಗಿನ ಶ್ರೀಶಿವಾನಂದರ ಅಂತರಂಗದ ಶಿಷ್ಯರು. ಗುರುಗಳ ಸೇವೆಯನ್ನು ಹೇಗೆ ಮಾಡಬೇಕು ಎಂಬುದಕ್ಕೆ ಅವರು ನಿದರ್ಶನವಾಗಿದ್ದರು. ಶ್ರೀಶಿವಾನಂದರು ಬೋಧಿಸಿದ ಶಿವಾದ್ವೈತ ಸಿದ್ಧಾಂತವನ್ನು ಶ್ರೀಬಸವದೇವರು ಅತ್ಯಂತ ಸಮರ್ಥವಾಗಿ ಪ್ರತಿಪಾದನೆ ಮಾಡುತ್ತಿದ್ದರು. ನಾನು ಹುಬ್ಬಳ್ಳಿಯಲ್ಲಿ ಎಂ.ಎಸ್. ಮಾಡುತ್ತಿರಬೇಕಾದರೆ ಶ್ರೀಸಿದ್ಧೇಶ್ವರ ಸ್ವಾಮಿಗಳನ್ನು ಭೇಟಿ ಮಾಡಿದ್ದರು ಎಂಬ ನೆನಪಿದೆ.

ಸಿದ್ಧೇಶ್ವರಶ್ರೀಗಳ ಮೇಲೆ ಗಾಮನಗಟ್ಟಿ ಶ್ರೀಬಸವದೇವರ ಪ್ರಭಾವ ಅಗಣಿತವಾಗಿರಲು ಅನೇಕ ಕಾರಣಗಳಿವೆ. ನಾನು ಪೂಜ್ಯ ಶ್ರೀಬಸವದೇವರನ್ನು 1966ರಿಂದಲೂ ನೋಡುತ್ತಾ ಬಂದಿದ್ದೆ. ಒಮ್ಮೆ ಅವರು ಮನೆ ತೊರೆದ ನಂತರ ಹಿಂದಿನ ಯಾವುದೇ ಸಂಬಂಧವನ್ನಿಟ್ಟುಕೊಳ್ಳಲಿಲ್ಲ. ಅವರು ಮಿತಾಹಾರಿಗಳು. ಭಕ್ತಿಭಂಡಾರಿ ಬಸವಣ್ಣ ಹೇಳಿದಂತೆ, ಕಾಯಕ ಮಾಡದೆ ಎಂದೂ ಪ್ರಸಾದ ಸ್ವೀಕರಿಸಿದವರಲ್ಲ. ಯಾವುದೇ ಸಂದರ್ಭದಲ್ಲೂ ಹಣವನ್ನು ಮುಟ್ಟಿದವರಲ್ಲ. ಇನ್ನು ಬ್ಯಾಂಕ್ ಖಾತೆಯಿಲ್ಲ. ಆಶ್ರಮದಲ್ಲಿ ಅಡುಗೆ ಸಹ ಮಾಡಿದವರಲ್ಲ. ಯಾರೋ ಭಕ್ತರು ಒಂದು ಹೊತ್ತಿಗೆ ಪ್ರಸಾದ ಮಾಡಿಕೊಂಡು ಬರುತ್ತಿದ್ದರು. ಅಲ್ಲಿದ್ದ ಭಕ್ತರ ಜೊತೆಗೆ ಶ್ರೀಬಸವದೇವರು ಅದನ್ನು ಸ್ವೀಕರಿಸುತ್ತಿದ್ದರು. ಅಲ್ಲಿಗೆ ಆಹಾರದ ಚಿಂತೆ ಮುಗಿದುಹೋಯ್ತು! ಯಾವುದೇ ಮಹಿಳೆಯರಿಂದ ಪಾದ ಮುಟ್ಟಿಸಿಕೊಂಡವರಲ್ಲ. ಪಾದಪೂಜೆಯಂತೂ ಅವರ ಬಳಿ ಸುಳಿದಿರಲಿಲ್ಲ. ಹಗಲು-ರಾತ್ರಿ ಭಕ್ತರಿಗಾಗಿ ಪ್ರವಚನ ಮಾಡುವುದು ಅವರ ದಿನದ ಕಾಯಕವಾಗಿತ್ತು.

ಶ್ರೀಬಸವದೇವರಿಗೆ ಬದುಕಿನ ಕೊನೆಯ ಹಂತದಲ್ಲಿ ಶಸ್ತ್ರಚಿಕಿತ್ಸೆಯ ಅಗತ್ಯ ಕಂಡುಬಂತು. ಅದಕ್ಕೆ ಅವರನ್ನು ಒಪ್ಪಿಸುವುದು ದೊಡ್ಡ ಕಷ್ಟವಾಯಿತು. ತಮಗೆ ಮಹಿಳಾ ಶುಶ್ರೂಷಕಿ ಸೇವೆ ಮಾಡಬಾರದು, ಪುರುಷ ಶುಶ್ರೂಷಕರೇ ಆಪರೇಷನ್ ಕೊಠಡಿಯಲ್ಲಿರಬೇಕು ಎಂಬ ಅವರ ಎಲ್ಲಾ ಕಂಡೀಷನ್‌ಗಳಿಗೆ ಒಪ್ಪಿ ಅವರನ್ನು ಕೆ.ಎಂ.ಸಿ. ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಮ್ಮ ಪ್ರಾಧ್ಯಾಪಕರೇ ಅವರಿಗೆ ಶಸ್ತ್ರಚಿಕಿತ್ಸೆ ನೆರವೇರಿಸಿದರು. ಅವರನ್ನು ಗಾಮನಗಟ್ಟಿ ಆಶ್ರಮಕ್ಕೆ ಕರೆದುಕೊಂಡು ಬಂದೆವು. ಆಮೇಲೆ ಎಷ್ಟೇ ಒತ್ತಾಯ ಮಾಡಿದರೂ ಆಸ್ಪತ್ರೆಗೆ ಬರಲಿಲ್ಲ. ಕ್ಯಾನ್ಸರ್ ತನ್ನ ಭೀಕರತೆಯನ್ನು ತೋರಿದರೂ ಅವರು ಜಗ್ಗಲಿಲ್ಲ. ದೇಹ ಸೋತಿದ್ದರೂ ಅವರು ಭಕ್ತರಿಗೆ ಪ್ರವಚನಗಳನ್ನು ಮಾಡುವುದನ್ನು ನಿಲ್ಲಿಸಲಿಲ್ಲ. ಆಶ್ರಮದಲ್ಲಿ ಭಕ್ತರು ಭಜನೆ ಮಾಡುತ್ತಿದ್ದಾಗಲೇ ಶ್ರೀಬಸವದೇವರು ನಗುನಗುತ್ತಾ ಕೈಲಾಸವಾಸಿಗಳಾದರು.

ಪೂಜ್ಯಸಿದ್ಧೇಶ್ವರಸ್ವಾಮಿಗಳು ಸಹ ತಮ್ಮ ಮಾನಸಗುರುಗಳಾದ ಶ್ರೀಬಸವದೇವರನ್ನು ಅನುಸರಿಸಿದ್ದಾರೆ. ಪೂಜ್ಯ ಶ್ರೀಸಿದ್ಧೇಶ್ವರ ಶ್ರೀಗಳು ದೇಹತ್ಯಾಗದ ಹಿಂದಿನ ರಾತ್ರಿ ಅಲ್ಲಮಪ್ರಭು ಕುರಿತಾದ ಗ್ರಂಥವೊಂದನ್ನು ಅಧ್ಯಯನ ಮಾಡಿದ್ದಾರೆ. ಸಿದ್ಧೇಶ್ವರ ಶ್ರೀಗಳು ಇಚ್ಛಾಮರಣಿಗಳು. ತಮ್ಮ ಮರಣದ ಘಳಿಗೆ ಅವರಿಗೆ ಗೊತ್ತಿತ್ತು. ಆದರೂ ತಮ್ಮ ಅಧ್ಯಯನ ಕಾಯಕವನ್ನು ಅವರು ಬಿಟ್ಟಿರಲಿಲ್ಲ.

ಶ್ರೀಸಿದ್ಧೇಶ್ವರಸ್ವಾಮಿಗಳ ಮಹತ್ವದ ಕೊಡುಗೆಯೆಂದರೆ, ಅಲ್ಲಮಪ್ರಭುವಿನ ಮಹತ್ವದ ವಚನಗಳನ್ನು ಇಂಗ್ಲಿಷ್‌ಭಾಷೆಗೆ ಅನುವಾದ ಮಾಡಲು ಮಾರ್ಗದರ್ಶನ ನೀಡಿರುವುದು. ತಮ್ಮ ಗುರುಗಳಾದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳ ಕುರಿತಂತೆ ಅವರು ರಚಿಸಿರುವ 'ಸಿದ್ಧಾಂತ ಶಿಖಾಮಣಿ' ಗ್ರಂಥ ಶ್ರೀಗಳ ವಿದ್ವತ್ತು ಮತ್ತು ಸಂಗ್ರಹಶಕ್ತಿಯನ್ನು ತೋರಿಸುತ್ತದೆ. 'ಭಗವದ್ಗೀತೆ'ಯ ಸರಳಾನುವಾದ ಅವರ ನೆನಪನ್ನು ಚಿರಕಾಲ ಉಳಿಸುತ್ತದೆ.

ಸಿದ್ಧೇಶ್ವರ ಶ್ರೀಗಳು ಕನ್ನಡ, ಮರಾಠಿ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ನಿರರ್ಗಳವಾಗಿ ಉಪನ್ಯಾಸ ನೀಡುತ್ತಿದ್ದರು. ಕರ್ನಾಟಕ ಅಧ್ಯಾತ್ಮಲೋಕದಲ್ಲಿ ಸಿದ್ಧೇಶ್ವರ ಶ್ರೀಗಳು ಹೊಸಪರಂಪರೆಯನ್ನು ರಚಿಸಿದರು. ಅವರ ಪ್ರವಚನಗಳಲ್ಲಿ ಬುದ್ಧ, ಬಸವ, ಅಲ್ಲಮಪ್ರಭು, ಶಂಕರಾಚಾರ್ಯ, ಗಾಂಧಿ, ರಾಮಕೃಷ್ಣ ಪರಮಹಂಸರು, ವಿವೇಕಾನಂದ, ಡಾ. ಅಂಬೇಡ್ಕರ್, ಏಸುಪ್ರಭು, ಮಹಮದ್ ಪೈಗಂಬರ್, ಮಹಾವೀರ, ಲೆನಿನ್, ಕಾರ್ಲ್‌ಮಾರ್ಕ್ಸ್ ಮೊದಲಾದವರ ಅಭಿಪ್ರಾಯಗಳು ನಿರಂತರವಾಗಿ ಬಳಕೆಯಾಗುತ್ತಿದ್ದವು. ಅವರ ಉಪನ್ಯಾಸವೆಂದರೆ ವಿಶ್ವದ ಎಲ್ಲಾ ಜ್ಞಾನವನ್ನು ತಮ್ಮ ಭಾಷೆಯಲ್ಲಿ ಪಡೆಯುವುದಾಗಿತ್ತು.

ಸಿದ್ಧೇಶ್ವರ ಶ್ರೀಗಳು ತಾವು ಉಳಿದುಕೊಂಡ ಸ್ಥಳದಲ್ಲೇ ಬೆಳಗ್ಗೆ ಆರುಘಂಟೆಗೆ ಪ್ರವಚನ ನೀಡುತ್ತಿದ್ದರು. ಸುಮಾರು ನಲವತ್ತೈದು ನಿಮಿಷ ಅವರ ಚಿಂತನಗಳನ್ನು ಶ್ರೋತೃಗಳು ಕೇಳಬಹುದಾಗಿತ್ತು. ಸಂಜೆ ಸಹ ಆರು ಘಂಟೆಗೆ ಎಂದರೆ ಒಂದು ನಿಮಿಷ ತಡವಿಲ್ಲ. ಸರಿಯಾದ ಸಮಯಕ್ಕೆ ಸಿದ್ಧೇಶ್ವರ ಶ್ರೀಗಳು ವೇದಿಕೆ ಹತ್ತಿ ಪ್ರವಚನ ಪ್ರಾರಂಭ ಮಾಡುತ್ತಿದ್ದರು. ಏಳು ಘಂಟೆಗೆ ಕಡ್ಡಾಯವಾಗಿ ಮುಕ್ತಾಯ. ಸ್ವಾಗತ, ಪರಿಚಯ, ವಂದನಾರ್ಪಣೆ ಮೊದಲಾದ ವಿಧಿಗಳಿರುತ್ತಿರಲಿಲ್ಲ. ಅವರು ಪ್ರವಚನ ಪ್ರಾರಂಭಿಸುವ ಮೊದಲೇ ಜನ ಕುಳಿತಿರುತ್ತಿದ್ದರು. ನಂತರ ಯಾರೂ ಬರುವ ಸಂದರ್ಭವೇ ಬರುತ್ತಿರಲಿಲ್ಲ. ಇನ್ನು ಸಿದ್ಧೇಶ್ವರ ಶ್ರೀಗಳು ಪ್ರವಚನ ಮಾಡುವಾಗ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದ ಸಭಾಂಗಣದಲ್ಲಿರುತ್ತಿತ್ತು. ಕೇಳುಗರಲ್ಲಿ ಇಂತಹ ಶಿಸ್ತು ಮೂಡಿಸಿದ ಏಕೈಕ ಶ್ರೀಗಳೆಂದರೆ ಸಿದ್ಧೇಶ್ವರ ಸ್ವಾಮಿಗಳೆಂಬುದು ಹೆಮ್ಮೆಯ ವಿಚಾರ.

ಶ್ರೀಸಿದ್ಧೇಶ್ವರಸ್ವಾಮಿಗಳು ನಿರಂತರವಾಗಿ ದೇಶ-ವಿದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ಪ್ರವಾಸದ ಅನುಭವಗಳನ್ನು ತಮ್ಮ ಪ್ರವಚನಗಳಲ್ಲಿ ಅವರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಈ ಅನುಭವಜನ್ಯ ಪ್ರವಚನಗಳಲ್ಲಿ ಧಾರ್ಮಿಕ ವಿಚಾರಗಳಿಗೆ ಮಾತ್ರ ಆದ್ಯತೆ ದೊರೆಯುತ್ತಿರಲಿಲ್ಲ, ಅಲ್ಲಿ ಸೂರ್ಯೋದಯ, ಹಕ್ಕಿಗಳ ಚಿಲಿಪಿಲಿ, ಬೆಟ್ಟ-ಗುಡ್ಡಗಳು, ನದಿ, ಸಮುದ್ರ, ಆಕಾಶ, ಚಿಟ್ಟೆ, ಹೂವು, ಮರಗಿಡ ಮುಂತಾದ ಪ್ರಕೃತಿಯ ಅನೇಕ ವಿಷಯಗಳು ಅವರ ಉಪನ್ಯಾಸದಲ್ಲಿ ಇರುತ್ತಿದ್ದವು. ಅವರು ಮೂಲತಃ ಪ್ರಕೃತಿಯ ಆರಾಧಕರಾಗಿದ್ದರು. 'ಮನುಷ್ಯ ಲೌಕಿಕ ಜೀವನದಲ್ಲಿ ಸದಾ ಸಂತೃಪ್ತನಾಗಿರಬೇಕು. ಅವನ ಮನಸ್ಸು ಯಾವಾಗಲೂ ಊರ್ಧ್ವಮುಖಿಯಾಗಿರಬೇಕು' ಎಂಬುದು ಅವರ ಪ್ರಮುಖ ಸಂದೇಶ.

ಶ್ರೀಸಿದ್ಧೇಶ್ವರಸ್ವಾಮಿಗಳ ಬದುಕು ಮಾತ್ರವಲ್ಲ ಸಾವು ಸಹ ಜನತೆಗೆ ಪ್ರಬಲ ಸಂದೇಶ ಕೊಡಬಲ್ಲದು. ತಮಗೆ ಯಾವುದೇ ಸ್ಮಾರಕ ನಿರ್ಮಿಸಬಾರದು ಎಂಬುದು ಅವರ ಇಚ್ಛೆಯಾಗಿತ್ತು. ಸಾವಿನ ನಂತರ ತಮ್ಮ ದೇಹವನ್ನು ಅಗ್ನಿಯ ಮೂಲಕ ಪಂಚಭೂತಗಳಲ್ಲಿ ಸೇರಿಸಿಬಿಡಿ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದರು. ಶ್ರೇಷ್ಠ ಶಿವಶರಣರು ತಮಗೆ ಸ್ಥಾವರ ಬೇಕೆಂದು ಎಂದೂ ಹೇಳಿದವರಲ್ಲ.

ಕೊನೆಯದಾಗಿ ನಾನು ಆಶ್ಚರ್ಯಕರ ಸಂಗತಿಯೊಂದನ್ನು ಹಂಚಿಕೊಳ್ಳಬೇಕಾಗಿದೆ. ಕರ್ನಾಟಕದ ಜನತೆಯಲ್ಲಿ ಗುಣವನ್ನು ಮೆಚ್ಚುವ ಔದಾರ್ಯವಿದೆ. ಅದನ್ನು ಶ್ರೀಸಿದ್ಧೇಶ್ವರ ಸ್ವಾಮಿಗಳ ಬದುಕಿನಿಂದ ನೋಡಬಹುದು. ಸಿದ್ಧೇಶ್ವರ ಶ್ರೀಗಳು ಯಾವುದೇ ದೊಡ್ಡ ಸ್ಥಾನಮಾನವಿಲ್ಲದವರು. ಪ್ರತಿಷ್ಠಿತ ಧಾರ್ಮಿಕಪೀಠದ ಮುಖ್ಯಸ್ಥರಾಗಿರಲಿಲ್ಲ. ರಾಜಕೀಯದ ಬಲವಿರಲಿಲ್ಲ. ಯಾವುದೇ ರಾಜಕೀಯ ಪಕ್ಷವನ್ನು ನಿಯಂತ್ರಿಸುವ ಶಕ್ತಿ ಸಹ ಅವರಲ್ಲಿರಲಿಲ್ಲ. ಇಂತಹ ಸಿದ್ಧೇಶ್ವರ ಶ್ರೀಗಳು ನಿಧನರಾದ ಮೇಲೆ ಅವರ ಅಂತ್ಯಕ್ರಿಯೆಗೆ ಲಕ್ಷಾಂತರ ಜನ ಸೇರುತ್ತಾರೆ. ಇವರು ಅತ್ಯಂತ ಶಿಸ್ತಿನಿಂದ ವರ್ತಿಸಿ ಸಿದ್ಧೇಶ್ವರ ಶ್ರೀಗಳನ್ನು ಅವರ ಆಶಯಕ್ಕೆ ತಕ್ಕಂತೆ ಕಳುಹಿಸಿಕೊಡುತ್ತಾರೆ. ಇದೇನು ಸಾಮಾನ್ಯದ ಸಂಗತಿಯೇ. ಇದಕ್ಕೆ ಮುಖ್ಯ ಕಾರಣ, ಸಿದ್ಧೇಶ್ವರ ಶ್ರೀಗಳು ತಮ್ಮ ಪ್ರವಚನದ ಮೂಲಕ ಸಮುದಾಯದ ಬೌದ್ಧಿಕ ವಿಕಾಸಕ್ಕೆ ಕಾರಣರಾಗಿದ್ದು. ಸಮುದಾಯವನ್ನು ಪ್ರಬುದ್ಧವಾಗಿಸುವಲ್ಲಿ ಅವರ ಕೊಡುಗೆ ಮರೆಯಲಾಗದಂತಹದ್ದು. ಇಂತಹ ಅಪರೂಪದ ಮಹಾನ್ ಸಂತ ಪೂಜ್ಯ ಸಿದ್ಧೇಶ್ವರಶ್ರೀಗಳಿಗೆ ಕೋಟಿಕೋಟಿ ನಮನ.

⌘

■ ಆದರ್ಶ ಜೀವನ

■ ರತನ್ ಟಾಟಾ
ಉದ್ಯಮಿ

# ಸರಿ ಅನ್ನಿಸಿದ್ದನ್ನು ಮಾಡುವುದೇ ಬದುಕಿನ ಸಾರ

ನನ್ನ ಬಾಲ್ಯ ಸಂತಸದಿಂದ ಕೂಡಿದ್ದಾಗಿತ್ತು. ನಾನು ಮತ್ತು ನನ್ನ ಸಹೋದರ ಬೆಳೆಯುತ್ತಾ ಹೋದಂತೆ ನಮ್ಮ ತಂದೆ ತಾಯಿಯರ ವಿಚ್ಛೇದನದ ಕಾರಣದಿಂದಾಗಿ ರ್‍ಯಾಗಿಂಗ್‌ಗೆ ಒಳಗಾಗಬೇಕಾಯಿತು (ಹಿಂಸೆಗೆ). ವಿಚ್ಛೇದನ ಎಂಬುದು ಆ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮಜ್ಜಿ ನಮ್ಮನ್ನು ಬೆಳೆಸಿದರು.

ವಿಚ್ಛೇದನದ ನಂತರ ನಮ್ಮ ತಾಯಿ ಪುನರ್ ವಿವಾಹವಾದ ಮೇಲೆ ನಾವು ಕಲಿಯುತ್ತಿದ್ದ ಶಾಲೆಯಲ್ಲಿ ಹುಡುಗರು ನಮ್ಮ ಬಗ್ಗೆ ಏನೆಲ್ಲಾ ಮಾತಾಡುತ್ತಿದ್ದರು. ಆದರೂ ನಮ್ಮ ಅಜ್ಜಿ ಅದೇನೇ ಆದರೂ ಘನತೆಯನ್ನು ಕಾಪಾಡಿಕೊಳ್ಳಬೇಕು ಎಂಬುದನ್ನು ನಮಗೆ ಕಲಿಸಿದರು.

ಇದೇ ವೇಳೆ ನಾನು ಮುಖ್ಯವಾಗಿ ಹೇಳಬೇಕಾಗಿರುವುದು ಏನೆಂದರೆ, ಒಂದೊಮ್ಮೆ ಅಜ್ಜಿಯ ಪ್ರಭಾವ ನನ್ನ ಮೇಲೆ ಆಗದೇ ಇದ್ದಿದ್ದರೆ ಈಗ ಏನಾಗಿರುವೆನೋ ಅದರ ಅರ್ಧದಷ್ಟು ವ್ಯಕ್ತಿತ್ವದವನಷ್ಟು ಮಾತ್ರ ಆಗಿರುತ್ತಿದ್ದೆ ಎಂಬುದು ಬಲವಾದ ಅಭಿಪ್ರಾಯವಾಗಿದೆ.

ಯಾವುದೇ ವಿಷಯದ ಬಗ್ಗೆ ತಂದೆ ಹಾಗೂ ನನ್ನ ನಡುವೆ ಒಮ್ಮತ ಎಂಬುದಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ, ನನಗೆ ಕಾಲೇಜು ವ್ಯಾಸಂಗ ಮಾಡಲು ಅಮೆರಿಕಕ್ಕೆ ಹೋಗಬೇಕೆಂಬ ಮನಸ್ಸು. ಆದರೆ ನನ್ನ ತಂದೆ ಇಂಗ್ಲೆಂಡ್‌ಗೆ ಹೋಗುವಂತೆ ಒತ್ತಾಯಿಸುತ್ತಿದ್ದರು. ಹಾಗೆಯೇ, ನನಗೆ ಆರ್ಕಿಟೆಕ್ಟ್ ಆಗಬೇಕೆಂಬ ಬಯಕೆ. ಆದರೆ ಅಪ್ಪ ನನ್ನನ್ನು ಎಂಜಿನಿಯರ್ ಆಗುವಂತೆ ಒತ್ತಾಯಿಸುತ್ತಿದ್ದರು. ನನಗೆ ಅಜ್ಜಿಯ ಬೆಂಬಲವಿಲ್ಲದಿದ್ದರೆ ನಾನು ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯ ಸೇರಲು ಸಾಧ್ಯವಾಗುತ್ತಿರಲಿಲ್ಲ. ಆರಂಭದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ಗೆ ಪ್ರವೇಶ ಪಡೆದರೂ, ಆಮೇಲೆ ಮೇಜರ್ ವಿಷಯಗಳನ್ನು ಬದಲಿಸಿಕೊಂಡು ಆರ್ಕಿಟೆಕ್ಚರ್ ಪದವಿ ಪಡೆಯಲು ನನ್ನ ಅಜ್ಜಿಯೇ ಕಾರಣ. ಇದರಿಂದ ನನ್ನ ತಂದೆಗೆ ಬೇಸರವಾಯಿತು. ಆದರೆ ನಾನು ಸ್ವಂತಿಕೆಯೊಂದಿಗೆ ಬೆಳೆದಿದ್ದೆ. ಕಾಲೇಜಿನಲ್ಲಿ ಒಬ್ಬ ಸ್ವತಂತ್ರ ವ್ಯಕ್ತಿತ್ವದ ವಿದ್ಯಾರ್ಥಿಯಾಗಿ ಹೊರಹೊಮ್ಮಿದ್ದೆ. ನನಗೆ ಏನು ಅನ್ನಿಸುತ್ತದೆಯೋ ಅದನ್ನು ಮೃದುವಾಗಿಯೇ ಬೇರೊಬ್ಬರ ಮುಂದೆ ಪ್ರಕಟಿಸಬಹುದು ಎಂಬುದನ್ನು ನನಗೆ ಕಲಿಸಿದ್ದು ನನ್ನ ಅಜ್ಜಿಯೇ.

ಕಾಲೇಜು ವಿದ್ಯಾಭ್ಯಾಸ ಮುಗಿದ ನಂತರ ನಾನು ಲಾಸ್‌ಏಂಜಲೀಸ್‌ನಲ್ಲಿನ ಒಂದು ವಾಸ್ತುಶಿಲ್ಪ ಕಂಪನಿಯಲ್ಲಿ ಕೆಲಸಕ್ಕೆ ಸೇರಿದೆ. ಅಲ್ಲಿ ಎರಡು ವರ್ಷಗಳ ಕಾಲ ಕೆಲಸ ಮಾಡಿದೆ. ಅದು ನಿಜವಾಗಿಯೂ ಅದ್ಭುತವಾದ ಸಮಯ. ಅಲ್ಲಿನ ಹವಾಮಾನ ಕೂಡ ತುಂಬಾ ಸೊಗಸಾಗಿತ್ತು. ನಾನು ಕೆಲಸವನ್ನು ಪ್ರೀತಿಸುತ್ತಿದ್ದೆ. ಹೀಗೆ ಲಾಸ್‌ಏಂಜಲೀಸ್‌ನಲ್ಲಿ ಇದ್ದಾಗಲೇ ನಾನು ಪ್ರೀತಿಯ ಬಲೆಗೆ ಬಿದ್ದು, ಅದು ಇನ್ನೇನು ಮದುವೆಯ ಹಂತಕ್ಕೂ ಬಂದಿತ್ತು. ಅದೇ ವೇಳೆಗೆ ನನ್ನ ಅಜ್ಜಿಗೆ ಹುಷಾರಿರಲಿಲ್ಲವಾದ್ದರಿಂದ ಸದ್ಯದ ಮಟ್ಟಿಗಾದರೂ ಭಾರತಕ್ಕೆ ವಾಪಸ್ಸು ಬರಬೇಕೆಂದು ನಿರ್ಧರಿಸಿದ್ದೆ. ಅದರಂತೆ ನಾನು ನನ್ನ ಅಜ್ಜಿಯನ್ನು ನೋಡಲು ಭಾರತಕ್ಕೆ ಬಂದೆ. ಆಗ ನನ್ನನ್ನು ಮದುವೆಯಾಗಲು ಬಯಸಿದ್ದಾಕೆ ನನ್ನ ಜೊತೆ ಭಾರತಕ್ಕೆ ಬರುತ್ತಾಳೆ ಎಂದುಕೊಂಡಿದ್ದೆ. ಆದರೆ 1962ರ ಭಾರತ – ಚೀನಾ ಯುದ್ಧದಿಂದಾಗಿ ಆಕೆಯ ತಂದೆ ತಾಯಿಗೆ ಅವಳು ನನ್ನೊಂದಿಗೆ ಸಂಬಂಧ ಮುಂದುವರಿಸುವುದು ಒಪ್ಪಿಗೆಯಾಗಲಿಲ್ಲ. ಹೀಗಾಗಿ ಈ ಸಂಬಂಧ ಮುರಿದುಬಿದ್ದಿತು.

ಇದಾದಮೇಲೆ ನಾನು ಸ್ವಲ್ಪ ಸಮಯವನ್ನು ಅಜ್ಜಿಯೊಂದಿಗೆ ಕಳೆದೆ. ನಾಯಿಯನ್ನು ಅಡ್ಡಾಡಿಸುವುದು, ಅಜ್ಜಿಯ ಜೊತೆ ದೀರ್ಘಕಾಲ ಮಾತನಾಡುವುದು ನನ್ನ ಕೆಲಸವಾಗಿತ್ತು.

ಅದಾದ ನಂತರ ನಾನು ಈಗ ಟಾಟಾ ಮೋಟಾರ್ಸ್ ಎಂದು ಹೆಸರಾಗಿರುವ ಸಂಸ್ಥೆಯಲ್ಲಿ ಇಂಟರ್ನ್‌ಷಿಪ್ ಮಾಡಲು ಜಮ್‌ಷೆಡ್‌ಪುರಕ್ಕೆ ತೆರಳಿದೆ. ಅದು ಸಮಯ ಪೋಲಾಗುವ ವಿಷಯವಾಗಿತ್ತು. ಅಲ್ಲಿ ನನ್ನನ್ನು ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಬದಲಿಸುತ್ತಿದ್ದರು. ಅಲ್ಲದೇ, ಕಂಪನಿಯ ಮಾಲೀಕರ ಕುಟುಂಬದ ಸದಸ್ಯ ಆಗಿದ್ದುದರಿಂದ ಅಲ್ಲಿ ಯಾರೊಬ್ಬರೂ ನನಗೆ ಯಾವ ಕೆಲಸ ಮಾಡಬೇಕೆಂಬುದನ್ನೇ ಹೇಳುತ್ತಿರಲಿಲ್ಲ. ಏನಾದರೂ ಉಪಯುಕ್ತ ಕೆಲಸ ಮಾಡಲು ಪ್ರಯತ್ನಿಸುವುದರಲ್ಲಿ ಆರು ತಿಂಗಳು ಕಳೆದುಹೋಯಿತು.

ಇದಾದ ಮೇಲೆ, ನಾನು ಟಾಟಾಸ್ಟೀಲ್‌ಗೆ ಹೋದ ನಂತರವಷ್ಟೇ ನನಗೆ ನಿರ್ದಿಷ್ಟವಾದ ಕೆಲಸ ಎಂಬುದು ನಿಯೋಜನೆಗೊಂಡಿತು ಹಾಗೂ ಕೆಲಸವು ಆಸಕ್ತಿಕರ ಎನ್ನಿಸತೊಡಗಿತು. ನಾನು ತಳಹಂತದಿಂದ ಕೆಲಸ ಶುರುಮಾಡಿದೆ ಹಾಗೂ ಅಲ್ಲಿನ ಕಾರ್ಮಿಕರ ಪರಿಸ್ಥಿತಿ ಏನೆಂಬುದನ್ನು ಅರ್ಥ



ಮಾಡಿಕೊಂಡೆ. ಹೀಗಾಗಿ ಹಲವಾರು ವರ್ಷಗಳ ನಂತರ ಟಾಟಾ ಸ್ಟೀಲ್‌ನಲ್ಲಿ ಸಿಬ್ಬಂದಿ ಸಂಖ್ಯೆಯನ್ನು 78,000 ದಿಂದ 40,000ಕ್ಕೆ ಕಡಿತಗೊಳಿಸಿದಾಗ ಅವರಿಗೆ ಆಗ ನೀಡಲಾಗುತ್ತಿದ್ದ ವೇತನವನ್ನು ನಿವೃತ್ತಿಯವರೆಗೂ ಪಾವತಿಸುವುದಾಗಿ ಕಾರ್ಮಿಕರಿಗೆ ಖಾತ್ರಿ ನೀಡಿದೆವು. ಸಂಸ್ಥೆಗಾಗಿ ಯಾರು ಸೇವೆ ಸಲ್ಲಿಸುತ್ತಾರೋ ಅವರಿಗೆ ಅದನ್ನು ಪುನರಾರ್ಪಣೆ ಮಾಡುವುದು ನಮ್ಮ ಸಂಸ್ಥೆಯಲ್ಲಿ ಅಂತರ್ಗತವಾಗಿಬಿಟ್ಟಿದೆ.

ಆಮೇಲೆ 1991ರಲ್ಲಿ ಜೆ.ಆರ್.ಡಿ. ಅವರು ಮೊದಲಿಗೆ ಟಾಟಾ ಇಂಡಸ್ಟ್ರೀಸ್ ಚೇರ್ಮನ್ ಸ್ಥಾನದಿಂದ ಹಾಗೂ ನಂತರ ಟಾಟಾ ಸನ್ಸ್ ಚೇರ್ಮನ್ ಸ್ಥಾನದಿಂದ ಕೆಳಗಿಳಿದಾಗ ಕೆಲವಾರು ಟೀಕೆಗಳು ಕೇಳಿ ಬಂದವು. ಆ ಸ್ಥಾನಕ್ಕಾಗಿ ಇನ್ನಿತರ ಆಕಾಂಕ್ಷಿಗಳು ಇದ್ದರು. ಆ ಸ್ಥಾನಕ್ಕೆ ನನ್ನನ್ನು ನೇಮಕಗೊಳಿಸಿದ ಜೆ.ಆರ್.ಡಿ. ಅವರ ನಿರ್ಧಾರವನ್ನು ಅನೇಕರು ತಪ್ಪು ಎಂದು ಬಿಂಬಿಸತೊಡಗಿದರು. ಇಂತಹ ಪರಿಸ್ಥಿತಿ ಎದುರಾಗುತ್ತದೆ ಎಂಬುದನ್ನು ನಾನು ಮುಂಚೆಯೇ ಊಹಿಸಿದ್ದೆ. ಆದ್ದರಿಂದ ಅತ್ಯಂತ ಸೂಕ್ತ ಎನಿಸಿದಂತೆ ಮೌನವನ್ನು ಕಾಯ್ದುಕೊಂಡು ಸಾಮರ್ಥ್ಯವನ್ನು ಪ್ರಕಟಿಸುವ ಬಗ್ಗೆ ಗಮನ ಕೇಂದ್ರೀಕರಿಸಿದ್ದೆ.

ಜೆ.ಆರ್.ಡಿ ಅವರ ವಿಷಯದಲ್ಲಿ ಕೇಳಿಬರುತ್ತಿದ್ದ ಟೀಕೆಗಳು ವೈಯಕ್ತಿಕ ಸ್ವರೂಪದಲ್ಲಿರುತ್ತಿದ್ದವು. ಜೆ.ಆರ್.ಡಿ ಅವರು ಸ್ವಜನಪಕ್ಷಪಾತಿ ಎಂಬುದು ಹಾಗೂ ನನ್ನ ನೇಮಕಾತಿಯು ತಪ್ಪು ಆಯ್ಕೆ ಎಂಬುದು ಟೀಕಾಕಾರರ ಅಪಸ್ವರವಾಗಿತ್ತು. ಈ ಟೀಕೆಗಳ ಹಿನ್ನೆಲೆಯಲ್ಲಿ ನನ್ನನ್ನು ತುಂಬಾ ಎಚ್ಚರದಿಂದ ಗಮನಿಸಲಾಗುತ್ತಿತ್ತು. ಆದರೆ ಅಂತಹ ಸಂದರ್ಭದಲ್ಲಿ ನಾನು ಟಾಟಾ ಸ್ಟೀಲ್‌ನಲ್ಲಿ ತಳಹಂತದಿಂದ ಪಡೆದ ತರಬೇತಿಯು ದೊಡ್ಡ ವರವಾಗಿ ಒದಗಿಬಂದಿತು. ಆ ಸ್ಥಾನಕ್ಕೆ ನಾನು ಯಾವುದೇ ಸಿದ್ಧತೆ ಇಲ್ಲದೆ ಇದ್ದಕ್ಕಿದ್ದಂತೆ ನೇಮಕಗೊಂಡಿಲ್ಲ ಎಂಬುದು ರುಜವಾತಾಯಿತು.

ಒಟ್ಟಾರೆ ಅದೊಂದು ಮಹತ್ವದ ನಿರ್ಧಾರವಾಗಿತ್ತು. ನನ್ನನ್ನು ಸಂಸ್ಥೆಯ ಚೇರ್ಮನ್ ಆಗಿ ನೇಮಕಗೊಳಿಸಿದ ಮೇಲೆ ಜೆ.ಆರ್.ಡಿ ಜೊತೆ ಅವರ ಕಚೇರಿಗೆ ಹೋಗಿದ್ದು ನನಗೆ ನೆನಪಿದೆ. ಅಲ್ಲಿ ಅವರು ತಮ್ಮ ಕಾರ್ಯದರ್ಶಿಗೆ 'ತಾವು ಸಂಸ್ಥೆಯಿಂದ ನಿರ್ಗಮಿಸುವ ಸಮಯ ಬಂದಿದೆ' ಎಂಬುದನ್ನು ತಿಳಿಸಿದರು. ಆಗ ನಾನು, "ಇಲ್ಲ ಜೆ, ನೀವು ಕಚೇರಿಯಿಂದ ಹೊರಹೋಗಬೇಡಿ. ಎಲ್ಲಿಯವರೆಗೆ ನೀವು ಬಯಸುತ್ತೀರೋ ಅಲ್ಲಿಯವರೆಗೂ ಇದು ನಿಮ್ಮ ಕಚೇರಿ" ಎಂದು ಹೇಳಿದೆ. ಆಗ ಅವರು ನನ್ನನ್ನು, "ನೀನು ಎಲ್ಲಿ ಕುಳಿತುಕೊಳ್ಳುವೆ?" ಎಂದು ಕೇಳಿದರು. 'ನಾನು, ಇವತ್ತು ಎಲ್ಲಿ ಕುಳಿತಿದ್ದೇನೋ ಅಲ್ಲಿಯೇ ಕುಳಿತುಕೊಳ್ಳುತ್ತೇನೆ. ಕೆಳಗೆ ಹಾಲ್‌ನಲ್ಲಿ ನನ್ನ ಕಚೇರಿ ಇದೆ. ಅದು ತುಂಬಾ ಸೊಗಸಾಗಿದೆ' ಎಂದು ಪ್ರತಿಕ್ರಿಯಿಸಿದೆ.

ನಿಜವಾಗಿಯೂ ಅವರು ಅಲ್ಲಿ ಕಚೇರಿಯಲ್ಲಿ ಇರುವಂತಾಗಿದ್ದು ನನ್ನ ಅದೃಷ್ಟವೆಂದೇ ಹೇಳಬೇಕು. ಅವರು ನನ್ನ ಅತ್ಯಂತ ದೊಡ್ಡ ಮಾರ್ಗದರ್ಶಕರು ಹಾಗೂ ಅವರು ಬದುಕಿದ್ದಷ್ಟು ದಿನವೂ ನಾನು ಅವರ ಕಚೇರಿಗೆ ಹೋಗಿ, "ಜೆ ಅವರೇ, ಇದು ಹತ್ತು ವರ್ಷಗಳ ಹಿಂದೆಯೇ ಆಗಬೇಕಿತ್ತು ಎಂದು ನನಗನಿಸುತ್ತದೆ. ನಮ್ಮಿಬ್ಬರ ಸಂಬಂಧ ಅಷ್ಟು ಅದ್ಭುತವಾಗಿದೆ" ಎನ್ನುತ್ತಿದ್ದೆ. ಅವರು ನನಗೆ ತಂದೆ ಹಾಗೂ ಸಹೋದರನಂತೆ ಇದ್ದರು. ಆದರೆ ಇದು ಎಲ್ಲೂ ಹೊರಗೆ ಅಷ್ಟಾಗಿ ಪ್ರಚಾರಕ್ಕೆ ಬಾರದ ವಿಚಾರವಾಗಿದೆ.

ಮೊದಲಿನಿಂದಲೂ ನನ್ನ ಬದುಕು ಕಂಪನಿಯನ್ನು ಬೆಳೆಸುವುದಕ್ಕಾಗಿಯೇ ಮೀಸಲಾಗಿದೆ. ನನ್ನನ್ನು ಸಂಸ್ಥೆಯ ಚೇರ್ಮನ್ ಆಗಿ ನೇಮಕ ಮಾಡಿದಾಗ ಅದು ನನ್ನ ಉಪನಾಮದ ಕಾರಣದಿಂದಾಗಿ ಸಿಕ್ಕಿದೆ ಎಂದು ವ್ಯಾಖ್ಯಾನಿಸಲಾಯಿತು. ಆದರೆ ನಮಗೆಲ್ಲರಿಗಿಂತ ಮಿಗಿಲಾದುದ್ದನ್ನು ಸೃಷ್ಟಿಸಬೇಕು ಹಾಗೂ ಸಮಾಜದಿಂದ ಪಡೆದದ್ದನ್ನು ಸಮಾಜಕ್ಕೆ ವಾಪಸ್ಸು ನೀಡಬೇಕು ಎಂಬುದು ನನ್ನ ಗಮನವಾಗಿತ್ತು. ಇದು ಟಾಟಾ ಸಂಸ್ಥೆ ಶುರುವಾದಾಗಿನಿಂದಲೂ ಅದರ ಬುನಾದಿಯಲ್ಲಿ ಹಾಸುಹೊಕ್ಕಾಗಿದೆ.

ಜಮ್‌ಷೆಡ್‌ಪುರದ ವಿಷಯದ ಬಗ್ಗೆ ಹೇಳುವುದಾದರೆ, ಒಂದೆಡೆ ಅಲ್ಲಿನ ಸಂಸ್ಥೆಯ ನಮ್ಮ ಸಿಬ್ಬಂದಿ ಏಳಿಗೆ ಕಾಣುತ್ತಿದ್ದರೆ ಸುತ್ತಲಿನ ಹಳ್ಳಿಗಳು ನಿತ್ರಾಣದಿಂದ ಕಳೆಗುಂದುತ್ತಿರುವುದು ನಮ್ಮ ಗಮನಕ್ಕೆ ಬಂದಿತು. ಆಗ ಆ ಹಳ್ಳಿಗಳ ಜನರ ಬದುಕಿನ ಗುಣಮಟ್ಟವನ್ನು ಹೆಚ್ಚಿಸಬೇಕೆಂಬುದು ನಮ್ಮ ಗುರಿಯಾಯಿತು. ಇಂತಹ ಮನೋಧೋರಣೆಗಳು ಸ್ವಾಭಾವಿಕವಾಗಿಯೇ ನಮ್ಮೊಳಗೆ ಒಡಮೂಡುತ್ತಿದ್ದುದು ಗಮನಿಸಬೇಕಾದ ಅಂಶವಾಗಿದೆ.

ನ್ಯಾನೋ ಕಾರಿನ ವಿಷಯದಲ್ಲೂ ಹೀಗೆಯೇ ಆಯಿತು. ಮುಂಬೈನ ಮಳೆಯ ಅಬ್ಬರದಲ್ಲಿ ಕುಟುಂಬದ ನಾಲ್ವರು ಒಂದೇ ಬೈಕ್‌ನಲ್ಲಿ ಹೋಗುತ್ತಿದ್ದುದನ್ನು ನಾನು ನೋಡಿದ್ದು ನೆನಪಾಗುತ್ತಿದೆ. ಬೇರೆ ಯಾವುದೇ ಪರ್ಯಾಯವಿಲ್ಲದ ಕಾರಣಕ್ಕಾಗಿ ಅಪಾಯದ ಪರಿಸ್ಥಿತಿಯಲ್ಲೂ ಬೈಕ್ ಚಲಾಯಿಸುವ ಇಂತಹ ಕುಟುಂಬಗಳಿಗೆ ಏನನ್ನಾದರೂ ಕೊಡುಗೆ ನೀಡಬೇಕು ಎಂದು ಆಗ ನನಗೆ ಅನ್ನಿಸಿತು. ನ್ಯಾನೋವನ್ನು ರಸ್ತೆಗಿಳಿಸುವ ವೇಳೆಗೆ ಅದರ ಬೆಲೆ ಹೆಚ್ಚಾಗಿಬಿಟ್ಟಿತ್ತು. ಆದರೆ ಕಡಿಮೆ ಬೆಲೆಗೆ ಕಾರು ಸಿಗುವಂತೆ ಮಾಡುವುದಾಗಿ ನಾನು ಜನರಿಗೆ ಮಾತು ಕೊಟ್ಟುಬಿಟ್ಟಿದ್ದೆ. ಅದಕ್ಕೆ ತಕ್ಕಂತೆ ನಾವು ಕೊಟ್ಟ ವಾಗ್ದಾನವನ್ನು ಪೂರೈಸಿದೆವು. ಹಿಂದಿರುಗಿ ನೋಡಿದಾಗ, ಈ ಕಾರಿನ ಬಗ್ಗೆ ಹಾಗೂ ಈ ಸಂಬಂಧವಾಗಿ ನಾವು ತೆಗೆದುಕೊಂಡ ನಿರ್ಧಾರದ ಬಗ್ಗೆ ನನಗೆ ಹೆಮ್ಮೆ ಎನ್ನಿಸುತ್ತದೆ.

ಕೆಲಸ ಎಂಬುದೇ ನನ್ನ ಜೀವನಶೈಲಿಯಾಗಿಬಿಟ್ಟಿತು. ಯಾವಾಗಲೂ ಬಾಂಬೆ ಹೌಸ್‌ನಲ್ಲಿ ಇರುತ್ತಿದ್ದೆ ಅಥವಾ ತಿರುಗಾಟದಲ್ಲಿರುತ್ತಿದ್ದೆ. ಈ ಕಾರಣದಿಂದಾಗಿಯೇ, ಎರಡು ಮೂರು ಸಲ ನನಗೆ ಇನ್ನೇನು ಮದುವೆಯಾಗಬೇಕು ಎನ್ನುವಷ್ಟರಲ್ಲಿ ಅದು ನಿಂತು ಹೋಯಿತು. ಏಕೆಂದರೆ, ನನ್ನ ಸಂಗಾತಿಯಾಗುವವರು ನನ್ನ ಜೀವನಶೈಲಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಆ ರೀತಿಯ ನಿರೀಕ್ಷೆ ಸರಿಯಲ್ಲವೇನೋ ಎಂದು ನನ್ನೊಳಗೇ ಅನಿಸುತ್ತಿತ್ತು.

ಈಗ ನಾನು ನಿವೃತ್ತನಾಗಿದ್ದೇನೆ. ನನ್ನ ಜೀವನಶೈಲಿ ಪುನಃ ಬದಲಾಗಿದೆ. ಜನರು ನನ್ನನ್ನು, "ನೀವು ನಿಜವಾಗಿಯೂ ನಿವೃತ್ತರಾಗಿದ್ದೀರಾ?" ಎಂದು ಕೇಳುತ್ತಾರೆ. ಅವರಿಗೆ ನಾನು, ಅದರಲ್ಲಿ ಅನುಮಾನವೇ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಕಂಪನಿಯಿಂದ ಬೇರ್ಪಡೆಯಾಗಿರುವುದನ್ನು ನಾನು ಸಂತೋಷದಿಂದ ಸ್ವೀಕರಿಸಿದ್ದೇನೆ. ಅಂತಹ ದಿನಗಳನ್ನು ಸಂತಸದಿಂದ ಅನುಭವಿಸುತ್ತಿದ್ದೇನೆ. ನಾನೀಗ ದಿನಪತ್ರಿಕೆಗಳನ್ನು ಓದುತ್ತಿಲ್ಲ ಹಾಗೂ ನಕಾರಾತ್ಮಕ ಸಂಗತಿಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿಲ್ಲ.

ಆದರೆ ನಿಮಗೊಂದು ವಿಷಯ ಹೇಳಬೇಕು. ನಿವೃತ್ತಿ ಎಂದರೆ ಗಾಲ್ಫ್ ಆಡುವುದು ಅಥವಾ ಕಾಕ್ಟೇಲ್ ಗುಟುಕರಿಸುತ್ತಾ ಸಮುದ್ರದಂಡೆಯಲ್ಲಿ ಕುಳಿತು ಕಾಮಿಕ್ಸ್ ಓದುತ್ತಾ ಕೂರುವುದಲ್ಲ. ನಿಜವಾಗಿಯೂ ಹೇಳಬೇಕೆಂದರೆ, ಇನ್ನೂ ಹೆಚ್ಚಿನದನ್ನು ಮಾಡಬೇಕೆಂಬ ಹಂಬಲ ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಕ್ಯಾನ್ಸರ್ ಚಿಕಿತ್ಸೆಯ ವೆಚ್ಚವನ್ನು ತಗ್ಗಿಸುವುದರಿಂದ ಹಿಡಿದು ಗ್ರಾಮೀಣ ಭಾರತದಲ್ಲಿ ಬದುಕಿನ ಮಟ್ಟವನ್ನು ಸುಧಾರಿಸುವ ತನಕ ಹಲವಾರು ಕೆಲಸಗಳನ್ನು ಟಾಟಾ ಟ್ರಸ್ಟ್ ಮೂಲಕ ಸಾಧ್ಯವಾಗಿಸಬೇಕು ಎಂಬ ತೀವ್ರ ತುಡಿತ ನನ್ನದಾಗಿದೆ. ನನ್ನಷ್ಟಕ್ಕೆ ನಾನು ಖುಷಿಯಿಂದಿರಲು ಹಾಗೂ ಪ್ರಾಮಾಣಿಕವಾಗಿರಲು ಪ್ರಯತ್ನಿಸುತ್ತಿದ್ದೇನೆ. ಹಳಬರು, ಹೊಸಬರು ಹೀಗೆ ಎಲ್ಲಾ ವಯೋಮಾನದ ಗೆಳೆಯರೊಂದಿಗೆ ಕಾಲ ಕಳೆಯುತ್ತಾ ಅವರಿಂದ ಸದಾ ಹೊಸತನ್ನು ಕಲಿಯುತ್ತಿದ್ದೇನೆ.

ಈ 82ರ ವಯಸ್ಸಿನಲ್ಲಿಯೂ ನಾನು ಕಲಿಯುತ್ತಲೇ ಇದ್ದೇನೆ. ಹೀಗಾಗಿ, "ಏನಾದರೂ ಸಲಹೆ ಕೊಡಿ'ಎಂದು ನೀವು ನನ್ನನ್ನು ಕೇಳಿದಾಗ 'ಸೂಕ್ತ ಸಲಹೆ' ಎಂಬುದು ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ ಎಂದು ನನಗನ್ನಿಸುತ್ತದೆ. ಆದರೆ, ಸೂಕ್ತವಾದದ್ದನ್ನು ಮಾಡಬೇಕೆಂಬ ಬಯಕೆ ಮಾತ್ರ ಬದಲಾಗದೆ ಸ್ಥಿರವಾಗಿ ಉಳಿದುಕೊಂಡಿರುತ್ತದೆ.

ಹೀಗಾಗಿ, ನಾನು ಹೀಗೆ ಹೇಳಲು ಇಚ್ಛಿಸುತ್ತೇನೆ. ಸಲಹೆ ಎಂಬುದನ್ನು ಪಕ್ಕಕ್ಕಿಡಿ. ಕಷ್ಟವಾದರೂ ಸರಿ, ಸೂಕ್ತ ಎನಿಸಿದ್ದನ್ನು ಕೃತಿಯಲ್ಲಿ ಮಾಡಿ. ನಂತರ, ನಿಮ್ಮ ಜೀವನವನ್ನು ಹಿಂದಿರುಗಿ ನೋಡಿಕೊಂಡಾಗ, ಹಾಗೆ ಮಾಡುವುದೇ, ಅಂದರೆ, ಆಯಾ ಕಾಲಘಟ್ಟದಲ್ಲಿ ಸೂಕ್ತ ಅನ್ನಿಸಿದ್ದನ್ನು ಮಾಡುವುದೇ ಅತ್ಯಂತ ಯುಕ್ತವಾಗಿರುತ್ತದೆ.

■ ಕನ್ನಡಕ್ಕೆ: ವೆಂಕಟೇಶ ಪ್ರಸಾದ್ ಬಿ.ಎಸ್.

(ಪ್ರಧಾನ ಸಂಪಾದಕರು ಮತ್ತು ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್.ಹುಲಿನಾಯ್ಕರ್ ಅವರು ವಿಶ್ವದ ಖ್ಯಾತ ಉದ್ಯಮಿ, ಭಾರತದ ಔದ್ಯೋಗಿಕ ಕ್ಷೇತ್ರಕ್ಕೆ ಹೊಸರೂಪ ಕೊಟ್ಟ, ದಾರ್ಶನಿಕ ಪ್ರಜ್ಞೆಯುಳ್ಳ ಎಂಬತ್ತೆರಡು ವರ್ಷದ ಶ್ರೀ ರತನ್ ಟಾಟಾ ಅವರ ಬದುಕಿನ ಆಸಕ್ತಿಯ ಭಾಗವನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಸಂಪಾದಕರು)

# ಶ್ರೀದೇವಿ ಆಸ್ಪತ್ರೆಯ ಕೀಲು, ಮೂಳೆ ವಿಭಾಗದಿಂದ ವಿಚಾರಸಂಕಿರಣ, ಮಂಡಿ ಬದಲಾವಣೆ ಮತ್ತು ಸಿಎಂಇ ಕಾರ್ಯಾಗಾರ

ಶ್ರೀದೇವಿ ವೈದ್ಯಕೀಯ ಕಾಲೇಜಿನ 'ಮೂಳೆ ಮತ್ತು ಕೀಲು ವಿಭಾಗದಿಂದ' ಮಂಡಿ ಬದಲಾವಣೆಯ ಶಸ್ತ್ರಚಿಕಿತ್ಸೆ, ಅದರ ವಿಶೇಷ ನೇರಪ್ರಸಾರ ಮತ್ತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಮಾಹಿತಿ ತಂತ್ರಜ್ಞಾನದ ಅತಿ ಗರಿಷ್ಠ ಪ್ರಯೋಜನವನ್ನು ಈ ಕಾರ್ಯಾಗಾರ ಪಡೆಯಿತು. ಈ ಕಾರ್ಯಾಗಾರದಿಂದ ಆರ್ಥೋ ಯುವವೈದ್ಯರು ಆವಿಷ್ಕಾರಗೊಂಡಿರುವ ಹೊಸ ಹೊಸ ವಿಧಾನಗಳನ್ನು ಕಲಿಯಬಹುದಾಗಿದೆ. ಆಪರೇಷನ್ ಕೊಠಡಿಯಲ್ಲಿ ಶಸ್ತ್ರಚಿಕಿತ್ಸೆ ಮಾಡುತ್ತಿರುವ ವೈದ್ಯ ವಿದ್ಯಾರ್ಥಿಗಳು ಸಂವಹನ ಮಾಡಬಹುದಾಗಿದೆ. ಸಾರ್ವಜನಿಕರು ಸಭಾಂಗಣದಲ್ಲಿ ಕುಳಿತು ಆಪರೇಷನ್ ಕೊಠಡಿಯಲ್ಲಿ ನಡೆಯುವ ಶಸ್ತ್ರಚಿಕಿತ್ಸೆಯನ್ನು ನೋಡಬಹುದಾಗಿರುತ್ತದೆ. ವೈದ್ಯಕೀಯಕ್ಷೇತ್ರದಲ್ಲಿ ಅದರಲ್ಲೂ ಕೀಲು ಮತ್ತು ಮೂಳೆಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಯ ಇತಿಹಾಸದಲ್ಲಿ ಇದೊಂದು ಅಪರೂಪದ ಕಾರ್ಯಾಗಾರ ಎನ್ನಲಾಗಿದೆ.

ಕಾರ್ಯಾಗಾರವನ್ನು ಉದ್ಘಾಟಿಸಿದ ಡಾ.ಎಂ.ಆರ್.ಹುಲಿನಾಯ್ಕರ್ ಅವರು "ವಯೋವೃದ್ಧರಿಗೆ ನಮ್ಮಲ್ಲಿ ಮಂಡಿ ಮತ್ತು ಸೊಂಟದ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆಗಳನ್ನು ಅತ್ಯಾಧುನಿಕ ತಂತ್ರಜ್ಞಾನ ಉಪಯೋಗಿಸಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿರುತ್ತೇವೆ. ಇದು ಅತ್ಯಂತ ಕಠಿಣವಾದ ಶಸ್ತ್ರಚಿಕಿತ್ಸೆಯಾಗಿದ್ದು ಇದನ್ನು ಕಲಿಯಲು ತುಂಬಾ ಸಮಯ ಮತ್ತು ಅನುಭವ ಬೇಕಾಗಿರುತ್ತದೆ. ಯುವ ವೈದ್ಯರು ಕಲಿಕೆಯ ಕಾಲದಲ್ಲೇ ಶಸ್ತ್ರಚಿಕಿತ್ಸೆಯಲ್ಲಿ ತಮ್ಮ ನೈಪುಣ್ಯವನ್ನು ಬೆಳೆಸಿಕೊಳ್ಳಬೇಕು" ಎಂದರು. .

ಗೌರವ ಅತಿಥಿಗಳಾಗಿ ಆಗಮಿಸಿದ್ದ ಸಂಜಯ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಮಾಜಿ ಅಧ್ಯಕ್ಷರು ಹಾಗೂ ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್ ಮಾಜಿ ನಿರ್ದೇಶಕರಾದ ಡಾ.ಹೆಚ್.ಎಸ್.ಚಂದ್ರಶೇಖರ್ ಅವರು "ನೇರಪ್ರಸಾರದಿಂದ ಇಂತಹ ಸಿ.ಎಂ.ಇ. ಕಾರ್ಯಾಗಾರ ನಡೆಸುವುದು ತುಂಬಾ ಕಷ್ಟಕರವಾಗಿದೆ. ಆದರೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆರ್ಥೋ ವಿಭಾಗ ಯಾವುದೇ ನ್ಯೂನತೆಗಳಿರದೆ ಉತ್ತಮವಾದ ರೀತಿಯಲ್ಲಿ ಸಿ.ಎಂ.ಇ. ಸಂಘಟಿಸಿದೆ. ಇದರ




ಉಪಯೋಗವನ್ನು ವೈದ್ಯರು ಪಡೆದು ಅದನ್ನು ತಮ್ಮ ವೃತ್ತಿಯಲ್ಲಿ ಅಳವಡಿಸಿಕೊಳ್ಳಬೇಕು. ಇಂತಹ ಕಾರ್ಯಾಗಾರಗಳಿಂದ ಉತ್ತಮ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಪ್ರೇರಣೆ ದೊರೆಯುತ್ತದೆ. ಸ್ನಾತಕೋತ್ತರ ಪದವಿಯ ಅಧ್ಯಯನ ಕಾಲದಲ್ಲಿ ಪಠ್ಯ ಜ್ಞಾನದ ಜೊತೆ ತರಬೇತಿಗೆ ಹೆಚ್ಚು ಒತ್ತು ನೀಡಬೇಕು" ಎಂದರು.

ಇದೇ ಸಂದರ್ಭದಲ್ಲಿ, ಕೆ.ಒ.ಎ.ಅಧ್ಯಕ್ಷರಾದ ಡಾ.ಜೆ.ಅಶ್ವಿನಿ ಕುಮಾರ್ ಸಿಂಗ್‌ರವರು ಮಾತನಾಡುತ್ತಾ "ಎಲ್ಲಾ ವೈದ್ಯರು ಸಾಮಾನ್ಯ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಕ್ಲಿಷ್ಟಕರ ಸರ್ಜರಿಗಳನ್ನು ಮಾಡಲು ನಿರಂತರ ವೈದ್ಯಕೀಯ ಜ್ಞಾನ ಮತ್ತು ಕೌಶಲಗಳ ಅಗತ್ಯವಿರುತ್ತದೆ"ಎಂದರು.

ಕರ್ನಾಟಕ ಕೀಲು ಮತ್ತು ಮೂಳೆ ಸಂಘ, ಭಾರತೀಯ ವೈದ್ಯಕೀಯ ಸಂಘ ಮತ್ತು ತುಮಕೂರು ಕೀಲು ಮತ್ತು ಮೂಳೆ ಶಸ್ತ್ರಚಿಕಿತ್ಸೆಯ ಸಂಘದ ಸಹಯೋಗದೊಂದಿಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. "ಅತ್ಯುತ್ತಮ ಸ್ನಾತಕೋತ್ತರ ಪದವಿ ಶಿಕ್ಷಕ" ಎಂಬ ಬಿರುದು ನೀಡಲಾಯಿತು. ತುಮಕೂರಿನ ಹಿರಿಯ ಆರ್ಥೋಪೆಡಿಕ್ ಸರ್ಜನ್‌ರಾದ ಡಾ.ದೊಡ್ಡತಿಮ್ಮಯ್ಯರವರಿಗೆ"ಜೀವಮಾನ ಶ್ರೇಷ್ಠ ಪ್ರಶಸ್ತಿ" ನೀಡಲಾಯಿತು.

ಶ್ರೀದೇವಿ ಆಸ್ಪತ್ರೆ ಕೀಲು ಮತ್ತು ಮೂಳೆ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಎಂ. ಮುರಳೀಧರ್ ಅವರು ಮಾತನಾಡುತ್ತಾ, "ಈ ವಿಚಾರಸಂಕಿರಣದಲ್ಲಿ ಮಂಡಿ ಬದಲಾವಣೆ ಸರ್ಜರಿಯ ಬಗ್ಗೆ ಉಪನ್ಯಾಸ ನೀಡಲಾಗಿದ್ದು, ಈ ಸರ್ಜರಿಯನ್ನು ನೇರ ಪ್ರಸಾರ ಮಾಡಲಾಗಿದೆ ಜೊತೆಗೆ ಸರ್ಜರಿ ನಡೆಸುತ್ತಿರುವವರ ಜೊತೆ ವಿದ್ಯಾರ್ಥಿಗಳು ಆ ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮಂಡಿ ಬದಲಾವಣೆಯ ಕೀಲು ಮತ್ತು ಮೂಳೆಯ ಸುಮಾರು 40 ಕೃತಕ ಮಾದರಿಗಳನ್ನು ಉಪಯೋಗಿಸಿ ಶಸ್ತ್ರಚಿಕಿತ್ಸೆ ಮಾಡುವ ವಿಧಾನವನ್ನು ಪ್ರತಿಯೊಬ್ಬ ಸ್ನಾತಕೋತ್ತರ ವಿದ್ಯಾರ್ಥಿಗೂ ತಿಳಿಸಿಕೊಡಲಾಗುವುದು. ಇದರಿಂದ ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳು ಕೃತಕ ಮಾದರಿಗಳ ಮೇಲೆ ಅಭ್ಯಾಸವನ್ನು ಮಾಡಬಹುದು" ಎಂದರು.

ಕಾರ್ಯಾಗಾರದಲ್ಲಿ ಶ್ರೀದೇವಿ ವೈದ್ಯಕೀಯ ಸಂಸ್ಥೆಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ. ಎಲ್.ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ.ಮೋಹನ್ ಕುಮಾರ್, ಕೆ.ಒ.ಎ.ಅಧ್ಯಕ್ಷರಾದ ಡಾ. ಜೆ.ಅಶ್ವಿನಿಕುಮಾರ್ ಸಿಂಗ್, ತುಮಕೂರು ಐ.ಎಂ.ಎ. ಅಧ್ಯಕ್ಷರಾದ ಡಾ.ಎನ್. ಚಂದ್ರಶೇಖರ್, ಟಿ.ಒ.ಎಸ್. ಅಧ್ಯಕ್ಷರಾದ ಡಾ.ಟಿ.ವಿ.ತ್ಯಾಗರಾಜ್, ಶ್ರೀದೇವಿ ಆಸ್ಪತ್ರೆ ಕೀಲು ಮತ್ತು ಮೂಳೆ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಎಂ.ಮುರಳೀಧರ್, ಡಾ.ಅಕ್ಬರ್ ಇಕ್ರಂ ಅಹಮ್ಮದ್, ಡಾ.ಅಬ್ದುಲ್ ಖಾದರ್, ಡಾ.ಲಿಖಿತ್ ಹಾಗೂ ಡಾ.ಕಾಂತರಾಜು ಭಾಗವಹಿಸಿದ್ದರು. ⌘

## ಶ್ರೀ ಶುಭಕೃತ್ ಸಂವತ್ಸರದ ಕ್ಯಾಲೆಂಡರ್ ಬಿಡುಗಡೆ



ಪ್ರತಿಯೊಬ್ಬರೂ ಆರೋಗ್ಯವನ್ನು ಕಾಪಾಡಿಕೊಳ್ಳುವ ಶಕ್ತಿಯನ್ನು ಪ್ರದೇವರು ನೀಡಲಿ ಹಾಗೂ ಸಮೃದ್ಧ ಆರೋಗ್ಯಭರಿತ ಸಮುದಾಯವನ್ನು ನಾವೆಲ್ಲರೂ ಕಟ್ಟೋಣ ಎಂದು ನೂತನ ಶ್ರೀ ಶುಭಕೃತ್ ಸಂವತ್ಸರದ 2023 ಹೊಸ ವರ್ಷದ ಕ್ಯಾಲೆಂಡರ್‌ನ್ನು ಡಿ.31ರ ಶನಿವಾರದಂದು ಬಿಡುಗಡೆಗೊಳಿಸಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಶುಭ ಹಾರೈಸಿದರು. ಶ್ರೀದೇವಿ ವೈದ್ಯಕೀಯ ಸಂಸ್ಥೆಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್‌ರವರು ಮಾತನಾಡುತ್ತಾ "ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನೂತನವಾಗಿ ಹೃದಯ ರೋಗ ಚಿಕಿತ್ಸೆಗಾಗಿ ಅತ್ಯಾಧುನಿಕ ಕ್ಯಾತ್‌ಲ್ಯಾಬ್, ಸುಸಜ್ಜಿತ ಸಿ.ಸಿ.ಯು ಘಟಕವನ್ನು ಸ್ಥಾಪಿಸಲಾಗಿದೆ. ದಿನದ 24 ಗಂಟೆಯೂ ಚಿಕಿತ್ಸೆ ಲಭ್ಯವಿದೆ. ರೋಗಿಗಳಿಗೆ ಅತಿ ಕಡಿಮೆ ವೆಚ್ಚದಲ್ಲಿ ಹೃದಯ ರೋಗಕ್ಕೆ ಸಂಬಂಧಿಸಿದ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಹೃದ್ರೋಗಿಗಳಿಗೆ ಉತ್ತಮ ಆರೋಗ್ಯ ಚಿಕಿತ್ಸೆ ದೊರೆಯುವ ವ್ಯವಸ್ಥೆ ಮಾಡಲಾಗಿದೆ. ಆಂಜಿಯೋಗ್ರಾಂ ಮತ್ತು ಆಂಜಿಯೋಪ್ಲಾಸ್ಟಿಯಂತಹ ಶಸ್ತ್ರಚಿಕಿತ್ಸೆಯನ್ನು ಅತಿ ಕಡಿಮೆ ವೆಚ್ಚದಲ್ಲಿ ನಡೆಸಲಾಗುವುದು" ಎಂದು ತಿಳಿಸಿದರು. ⌘

## ಶ್ರೀದೇವಿ ವಿದ್ಯಾಮಂದಿರದಲ್ಲಿ 'ಶ್ರೀಚೇತನ ವಾರ್ಷಿಕೋತ್ಸವ'

"ವಿದ್ಯಾರ್ಥಿಗಳು ಪ್ರತಿಭೆ ಮತ್ತು ಕೌಶಲ್ಯವನ್ನು ಪ್ರದರ್ಶಿಸುವುದಕ್ಕೆ ಸೂಕ್ತ ವೇದಿಕೆಗಳು ದೊರೆಯುತ್ತಿವೆ. ಅವಕಾಶ ಎಂಬುದು ಯಾರ ಸೊತ್ತಲ್ಲ, ಪ್ರತಿಯೊಬ್ಬ ವಿದ್ಯಾರ್ಥಿಯ ಸೊತ್ತಾಗಿದೆ. ವಿದ್ಯಾರ್ಥಿ ಮತ್ತು ಪೋಷಕರು ಶಾಲೆಯ ಶಿಕ್ಷಕರ ಜೊತೆ ಒಡನಾಟವಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು ಪಠ್ಯದ ಜೊತೆ ಜೊತೆಗೆ ಪಠ್ಯೇತರ ಚಟುವಟಿಕೆಯ ಬಗ್ಗೆ ಆಸಕ್ತಿ ಹೊಂದಬೇಕು, ಅದು ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕವಾಗುತ್ತದೆ" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣದಲ್ಲಿ ಅಭಿಪ್ರಾಯಪಟ್ಟರು. ಶ್ರೀದೇವಿ ವಿದ್ಯಾಮಂದಿರದ ಆವರಣದಲ್ಲಿ ಜ. 13ರಂದು ಶಾಲಾ ವಾರ್ಷಿಕೋತ್ಸವದ ಪ್ರಯುಕ್ತ ಶ್ರೀಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ತುಮಕೂರಿನ ಕ್ಷೇತ್ರ ಸಮನ್ವಯಾಧಿಕಾರಿಯಾದ ನವೀನ್‌ಕುಮಾರ್‌ರವರು "ಸುಪ್ತ ಪ್ರತಿಭೆಗಳಿಗೆ ಈ ವೇದಿಕೆ ಉತ್ತಮ ಅವಕಾಶವನ್ನು ಕಲ್ಪಿಸುತ್ತದೆ. ವಿದ್ಯಾರ್ಥಿಗಳು ತಾವು ವಿದ್ಯಾಭ್ಯಾಸ ಮಾಡಿದ ಸಂಸ್ಥೆಗೆ ಒಳ್ಳೆಯ ಹೆಸರನ್ನು ತರಲಿ" ಎಂದು ಆಶಿಸಿದರು.

ಶ್ರೀದೇವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ಶ್ರೀದೇವಿ ವಿದ್ಯಾಮಂದಿರ ತುಮಕೂರಿನ ಗ್ರಾಮೀಣ ಜನತೆಗೆ ನರ್ಸರಿಯಿಂದ ಪ್ರೌಢಶಾಲಾ ವಿಭಾಗದವರೆಗೂ ಉತ್ತಮ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದೆ. ಇಲ್ಲಿ ಉತ್ತಮ ಶಿಕ್ಷಕರಿದ್ದಾರೆ. ಪ್ರತಿ ವರ್ಷವು ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತಮ ಫಲಿತಾಂಶ ಬರುತ್ತದೆ. ಈ ಮಕ್ಕಳಿಗೆ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಕ್ರೀಡೆಯಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಲಾಗುತ್ತಿದೆ" ಎಂದರು.

ಯುವವಿಮರ್ಶಕರು ಹಾಗೂ ಆರ್. ಎನ್.ಎಸ್. ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಡಾ.ಡಿ.ಸಿ.ಚಿತ್ರಲಿಂಗಯ್ಯರವರು ಮಾತನಾಡುತ್ತಾ "ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ನಾಣ್ಣುಡಿಯಂತೆ ಮಗುವಿಗೆ ಮೊದಲ ಗುರುವೇ ತಾಯಿ" ಎಂದರು. ಕಾರ್ಯಕ್ರಮದಲ್ಲಿ ಮಹಿಳಾ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರಾದ ಡಾ.ಎಂ.ಬಿ.ನವೀನ್‌ಕುಮಾರ್ ಅವರು ಮಾತನಾಡುತ್ತಾ "ಪೋಷಕರು ಮಕ್ಕಳನ್ನು ಗಮನಿಸುತ್ತಿರಬೇಕು, ಮಕ್ಕಳ ಮುಂದೆ ಅನವಶ್ಯಕ ಪದಗಳನ್ನು ಬಳಸಬಾರದು, ಯೌವ್ವನದಲ್ಲಿರುವ ಮಕ್ಕಳು ಸದಾ ಉತ್ಸಾಹಿಗಳಾಗಿರುವಂತೆ ಪ್ರೋತ್ಸಾಹಿಸಬೇಕು. ಮಕ್ಕಳು ಮೊಬೈಲ್‌ನಿಂದ ಹೆಚ್ಚು ಕಾಲ ದೂರವಿರುವಂತೆ ಮಾಡಬೇಕು" ಎಂದರು.

ನಿವೃತ್ತ ಮುಖ್ಯಶಿಕ್ಷಕರಾದ ಆರ್.ನಾರಾಯಣಪ್ಪ, ಕೆ.ಜಿ.ವಿಜಯ ಲಕ್ಷ್ಮಮ್ಮ, ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ವಿದ್ಯಾಮಂದಿರದ ಮುಖ್ಯೋಪಾಧ್ಯಾಯರಾದ ಬಿ.ಕೆ.ಬಸವರಾಜು ಅವರುಗಳು ಭಾಗವಹಿಸಿದ್ದರು. ⌘

ಕೇರಳದಲ್ಲಿ ಮಕರಸಂಕ್ರಾಂತಿ ಆಚರಣೆಗೆ ವಿಶೇಷ ಮಹತ್ವವಿದೆ. ಮಕರ ಸಂಕ್ರಾಂತಿಯಂದು ಶಬರಿಮಲೆಯಲ್ಲಿರುವ, ಹರಿಹರಸುತ ಶ್ರೀಅಯ್ಯಪ್ಪಸ್ವಾಮಿ ದರ್ಶನ ಮತ್ತು ಮಕರ ಜ್ಯೋತಿಯನ್ನು ನೋಡಲು ಎಲ್ಲೆಡೆಯಿಂದ ಅಲ್ಲಿಗೆ ಭಕ್ತರ ಸಮೂಹ ಬರುತ್ತದೆ. 'ಮಕರ ವಿಳಕ್ಕು' ಎಂದು ಕರೆಯಲ್ಪಡುವ ಈ ಜ್ಯೋತಿ ಮಕರ ಸಂಕ್ರಾಂತಿಯಂದು ಶಬರಿಮಲೆಯ ಬೆಟ್ಟದಲ್ಲಿ ಸಂಜೆ ಮೂರುಸಲ ಕಾಣಿಸಿಕೊಳ್ಳುತ್ತದೆ.

ಅರ್ಚನೆ



ಎನ್. ಭಾರತಿ
ಲೇಖಕಿ

# ಎಳ್ಳು-ಬೆಲ್ಲ ತಿಂದು ಒಳ್ಳೆಯ ಮಾತಾಡು

ಮಕರ ಸಂಕ್ರಾಂತಿ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಆಚರಿಸುವ ಪವಿತ್ರ ಹಬ್ಬವಾಗಿದೆ. ವೇದಾಂಗ ಜ್ಯೋತಿಷ್ಯದ ತಳಹದಿಯ ಮೇಲೆ ನಿಂತಿರುವ ಹಿಂದೂ ಹಬ್ಬವಿದು. ಈ ಕಾಲವನ್ನು ಉತ್ತರಾಯಣ ಅಥವಾ ಸೂರ್ಯ ಉತ್ತರ ದಿಕ್ಕಿನಿಂದ ತನ್ನ ಚಲನೆಯನ್ನು ಆರಂಭಿಸಿದ 'ಸಂಕ್ರಮಣಕಾಲ' ಎಂದು ವರ್ಣಿಸಲಾಗುತ್ತದೆ.ಸಂಕ್ರಾಂತಿ ಒಂದು ವಿಧದಲ್ಲಿ ಸೂರ್ಯಾರಾಧನೆ. 'ಸೂರ್ಯ ಆತ್ಮಾ ಜಗತಃ ತಸ್ಥುಷಶ್ಚ'. ಸೂರ್ಯದೇವ ವಿಶ್ವದ ಆತ್ಮ; ಜಗತ್ತಿನ ಕಣ್ಣು; ಮಳೆ ಬೀಳಲು, ಬೆಳೆ-ಬೆಳೆಯಲು, ಇಳೆ ಬೆಳಗಲು ಸೂರ್ಯನೇ ಕಾರಣ. ಆ ಸವಿತೃ ದೇವನ ದಿವ್ಯ ತೇಜಸ್ಸು ನಮಗೆ ಸಿದ್ಧಿ ಬುದ್ಧಿ ಸಮೃದ್ಧಿಗಳನ್ನು ನೀಡಲಿ ಎನ್ನುವ ಪ್ರಾರ್ಥನೆ ಈ ಹಬ್ಬದ ಆಚರಣೆಯ ಹಿಂದಿರುವ ತತ್ವ.

ಸಾಮಾನ್ಯ ದಿನಗಳಲ್ಲಿ ಎಳ್ಳನ್ನು ಯಾರೂ ದಾನವಾಗಿ ಪಡೆಯುವುದಿಲ್ಲ. ಮಕರ ಸಂಕ್ರಾಂತಿ ಹಬ್ಬದ ವೈಶಿಷ್ಟ್ಯವೇ ಎಳ್ಳನ್ನು ಕೊಡುವುದು. ಎಳ್ಳು- ಬೆಲ್ಲ, ಶೀತ-ವಾತದಿಂದ ಉಂಟಾಗುವ ಜಡ್ಡು, ಆಲಸ್ಯಗಳನ್ನು ದೂರ ಮಾಡುವ, ಸ್ನೇಹದ್ರವ್ಯಗಳ ಹಂಚಿಕೆ, ಸೇವನೆ, ದಾನ ಈ ಸಂಕ್ರಾಂತಿಯ ವೈಶಿಷ್ಟ್ಯ. ಎಳ್ಳು- ಬೆಲ್ಲ ತಿಂದು ಒಳ್ಳೆ ಮಾತಾಡು ಎನ್ನುವುದೇ ಮಕರ ಸಂಕ್ರಾಂತಿ ಹಬ್ಬದ ಸಂದೇಶ. ಚಳಿ ಕ್ರಮೇಣ ಮಾಯವಾಗುತ್ತಾ ಬೆಚ್ಚನೆಯ ವಾತಾವರಣ ಪ್ರಾರಂಭವಾಗುವ ಕಾಲವಿದು.

ಸೂರ್ಯ ದಕ್ಷಿಣ ದಿಕ್ಕಿನತ್ತ ತನ್ನ ಪ್ರಯಾಣವನ್ನು ನಿಲ್ಲಿಸಿ ಉತ್ತರದತ್ತ ಪ್ರಯಾಣ ಪ್ರಾರಂಭಿಸುತ್ತಾನೆ. ಸೂರ್ಯ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಕಾಲವಿದು. ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ಸಂಭ್ರಮದಿಂದ ಈ ಹಬ್ಬವನ್ನು ಆಚರಿಸಲಾಗುತ್ತದೆ. ತಮಿಳುನಾಡಿನಲ್ಲಿ ನಾಲ್ಕು ದಿನ ಸಂಕ್ರಾಂತಿ ಹಬ್ಬವನ್ನು ಆಚರಿಸುವುದುಂಟು. 'ಪೊಂಗಲ್ ಹಬ್ಬ' ಎಂದೇ ಜನಪ್ರಿಯವಾಗಿರುವ ಮಕರ ಸಂಕ್ರಾಂತಿಗೆ ತಮಿಳುನಾಡಿನಲ್ಲಿ ವಿಶೇಷವಾದ ಮಹತ್ವವಿದೆ. ಸಂಕ್ರಾಂತಿಗೆ ಪೌರಾಣಿಕ ಹಿನ್ನೆಲೆಯಿದೆ. ಸಂಕ್ರಾಂತಿ ಎಂಬ ದೇವತೆ 'ಶಂಕರ ಸೂರ್' ಎಂಬ ದೈತ್ಯನನ್ನು ಕೊಂದಳು ಎಂಬ ಐತಿಹ್ಯ ತಮಿಳುನಾಡಿನಲ್ಲಿ ಜನಪ್ರಿಯವಾಗಿದೆ. ಮಕರ ಸಂಕ್ರಾಂತಿ ಕಾಲದಲ್ಲಿ ದೇವತೆಗಳು ಧರೆಗಿಳಿದು ಸ್ನಾನ ಮಾಡಿದರೆಂಬ ಕಾರಣಕ್ಕೆ ಈ ಕಾಲದಲ್ಲಿ ಗಂಗಾಸ್ನಾನಕ್ಕೆ ಹೆಚ್ಚಿನ ಮಹತ್ವವಿದೆ.

ಉತ್ತರಾಯಣದ ಕಾಲದಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂಬ ನಂಬಿಕೆ ಭಾರತೀಯರದ್ದು, ಅದಕ್ಕಾಗಿ ಶರಶಯ್ಯೆಯ ಮೇಲೆ ಮಲಗಿದ್ದ ಕುರುಕುಲ ಪಿತಾಮಹ ಭೀಷ್ಮ ಈ ಕಾಲಕ್ಕಾಗಿ ಕಾಯುತ್ತಿದ್ದರೆಂದು ಮಹಾಭಾರತ ಮಹಾಕಾವ್ಯ ಹೇಳುತ್ತದೆ.

ಮಕರ ಸಂಕ್ರಾಂತಿ ಆಚರಣೆಗೆ ಸಂಬಂಧಪಟ್ಟಂತೆ ಪೌರಾಣಿಕ ಉಲ್ಲೇಖವಿರುವುದನ್ನು ಗಮನಿಸಬಹುದು. ಮಕರಸಂಕ್ರಾಂತಿಯ ಕಾಲದ ಕೆಲವು ಘಟನೆಗಳಿವೆ. ಕೃತಯುಗದಲ್ಲಿ ಶಿವನು ಪಾರ್ವತಿಯನ್ನು ವಿವಾಹವಾಗಿದ್ದು, ಬ್ರಹ್ಮ ಜಗತ್ತಿನ ಸೃಷ್ಟಿ ಕಾರ್ಯ ಪ್ರಾರಂಭಿಸಿದ್ದು, ಗೌತಮರು ಇಂದ್ರನ ಶಾಪವಿಮೋಚನೆ ಮಾಡಿದ



ಕಾಲವಿದು. ಶ್ರೀಮನ್ನಾರಾಯಣ ವರಾಹ ಅವತಾರ ತಾಳಿ ಭೂಮಿಗೆ ಬಂದಿದ್ದು, ಸಮುದ್ರ ಮಂಥನದಲ್ಲಿ ಶ್ರೀ ಮಹಾಲಕ್ಷ್ಮೀ ಅವತರಿಸಿದ್ದು ಹಾಗೂ ಋಷಿಗಳು ತಪಸ್ಸಿನ ಆಯ್ಕೆ ಮಾಡಿಕೊಂಡಿದ್ದ ಕಾಲ.

ಕೇರಳದಲ್ಲಿ ಮಕರಸಂಕ್ರಾಂತಿ ಆಚರಣೆಗೆ ವಿಶೇಷ ಮಹತ್ವವಿದೆ. ಮಕರ ಸಂಕ್ರಾಂತಿಯಂದು ಶಬರಿಮಲೆಯಲ್ಲಿರುವ, ಹರಿಹರಸುತ ಶ್ರೀಅಯ್ಯಪ್ಪಸ್ವಾಮಿ ದರ್ಶನ ಮತ್ತು ಮಕರ ಜ್ಯೋತಿಯನ್ನು ನೋಡಲು ಎಲ್ಲೆಡೆಯಿಂದ ಅಲ್ಲಿಗೆ ಭಕ್ತರ ಸಮೂಹ ಬರುತ್ತದೆ. 'ಮಕರ ವಿಳಕ್ಕು' ಎಂದು ಕರೆಯಲ್ಪಡುವ ಈ ಜ್ಯೋತಿ ಮಕರ ಸಂಕ್ರಾಂತಿಯಂದು ಶಬರಿಮಲೆಯ ಬೆಟ್ಟದಲ್ಲಿ ಸಂಜೆ ಮೂರುಸಲ ಕಾಣಿಸಿಕೊಳ್ಳುತ್ತದೆ.





ಶಬರಿಮಲೆಯಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿಯ ದರ್ಶನಕ್ಕೆ ಹೋಗುವ ಲಕ್ಷಾಂತರ ಭಕ್ತರು ಮಾಲೆ ಧರಿಸಿದ ಮೇಲೆ ಹದಿನೆಂಟು ದಿನಗಳ ಕಾಲ ಋಷಿಜೀವನ ನಡೆಸುತ್ತಾರೆ. ಹತ್ತಾರು ವರ್ಷ ಇದನ್ನು ಯಶಸ್ವಿಯಾಗಿ ಮಾಡಿರುವ ಸಾವಿರಾರು ಭಕ್ತರಿದ್ದಾರೆ. ಅವರಲ್ಲಿ ಬಹುತೇಕರು ಅಧ್ಯಾತ್ಮಜೀವಿಗಳಾಗಿ ಪರಿವರ್ತನೆಯಾಗಿದ್ದಾರೆ. ಶ್ರೀಅಯ್ಯಪ್ಪಸ್ವಾಮಿ ಭಾರತದ ಆಧ್ಯಾತ್ಮಿಕಚರಿತ್ರೆಯಲ್ಲಿ ಬೀರಿರುವ ಪ್ರಭಾವ ಗಣನೀಯವಾಗಿರುತ್ತದೆ.

ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ 'ಗಾಳಿಪಟ ಹಾರಿಸುವ' ಸಂಪ್ರದಾಯವಿದೆ. ಮಕರ ಸಂಕ್ರಾಂತಿಯಂದು ಲಿಂಗಸ್ವರೂಪಿಯಾಗಿರುವ ಬೆಂಗಳೂರಿನ ಗವಿಗಂಗಾಧರೇಶ್ವರ ಸ್ವಾಮಿಯ ಮೇಲೆ ಸೂರ್ಯನ ಕಿರಣಗಳ ಮಳೆ ಸುರಿಯುತ್ತದೆ. ಇದನ್ನು ನೋಡಲು ಸಾವಿರಾರು ಭಕ್ತರು ದೇವಾಲಯಕ್ಕೆ ಆಗಮಿಸುತ್ತಾರೆ. ಈ ದೇವಾಲಯ ಹನುಮಂತನಗರದಲ್ಲಿದೆ. ಗವಿಗಂಗಾಧರೇಶ್ವರ ಸ್ವಾಮಿಯ ಹೆಸರಿನಿಂದಲೇ ಈ ಸ್ಥಳ ಪ್ರಸಿದ್ಧವಾಗಿದೆ.

ಕೃಷಿ ಕೆಲಸಗಳು ಮುಗಿದ ಕಾರಣ ರೈತ ತನ್ನ ಜಾನುವಾರುಗಳಿಗೆ ಮೈ ತೊಳೆದು ಪೂಜೆ ಮಾಡಿ ಸಂಜೆ ಹೊತ್ತಿಗೆ ಗ್ರಾಮದ ಪ್ರಮುಖ ರಸ್ತೆಯಲ್ಲಿ ಬೆಂಕಿಹೊತ್ತಿಸಿ ಕಿಚ್ಚು ಹಾಯಿಸುತ್ತಾನೆ. ಇದರಿಂದ ತನ್ನ ಜಾನುವಾರುಗಳಿಗೆ ಭೂತಪ್ರೇತಗಳು ಕಾಟಕೊಡಲಾರವು ಎಂಬುದು ಆತನ ನಂಬಿಕೆ. ತಮಿಳುನಾಡಿನಲ್ಲಿ 'ಜಲ್ಲಿಕಲ್ಲು' ಎನ್ನುವ ಕ್ರೀಡೆಯಿದೆ. ಅದು ಗೂಳಿಯನ್ನು ಪಳಗಿಸುವ ಸಾಹಸದ ಕ್ರೀಡೆ. ಅಪಾಯಕಾರಿ ಕ್ರೀಡೆಯಾದರೂ ಸಾಕಷ್ಟು ಜನಪ್ರಿಯವಾಗಿದೆ.

ಗುಜರಾತ್‌ನಲ್ಲಿ ಮಕರ ಸಂಕ್ರಾಂತಿಯಂದು ಗಾಳಿಪಟ ಹಾರಿಸುತ್ತಾರೆ. ಮಹಾರಾಷ್ಟ್ರದಲ್ಲಿ ಎಳ್ಳಿನ ಜೊತೆ ಸಕ್ಕರೆ ಸೇರಿಸಿ ಹಂಚುತ್ತಾರೆ. ಪಂಜಾಬ್‌ನಲ್ಲಿ ಗಂಗಾಸ್ನಾನ ಮಾಡುತ್ತಾರೆ. ಹೀಗೆ ಭಾರತದ ಎಲ್ಲಾ ರಾಜ್ಯಗಳಲ್ಲೂ ಮಕರ ಸಂಕ್ರಾಂತಿಯನ್ನು ಅಲ್ಲಿನ ಸಾಂಸ್ಕೃತಿಕ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಆಚರಿಸಲಾಗುತ್ತದೆ.

ಮಕರ ಸಂಕ್ರಾಂತಿಗೆ ಸಾಕಷ್ಟು ಸಾಂಸ್ಕೃತಿಕ ಮಹತ್ವವಿದ್ದರೂ, ಅದರ ಆಚರಣೆಯಲ್ಲಿ ಹಿಂದಿದ್ದಷ್ಟು ಇಂದು ಉತ್ಸಾಹ ನೋಡಲು ಸಾಧ್ಯವಿಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳು ವರ್ಣರಂಜಿತವಾಗಿ ಹಬ್ಬವನ್ನು ಬಿತ್ತರಿಸಬಹುದು. ಜನತೆಯಲ್ಲಿ ಹಿಂದಿನ ಉತ್ಸಾಹವಿದೆಯೇ ಎಂಬುದು ಈಗ ಎಲ್ಲರೂ ಚಿಂತಿಸಬೇಕಾದ ವಿಚಾರವಾಗಿದೆ. ಅದಕ್ಕೆ ಕಾರಣಗಳು ಹಲವಿರಬಹುದು. ಇಂದಿನ ಬದುಕು ಬಹುಮಟ್ಟಿಗೆ ಯಾಂತ್ರಿಕವಾಗಿದೆ. ದಿನನಿತ್ಯದ ಬದುಕಿನಲ್ಲಿ ಹೋರಾಟ ಮಾಡುವುದೇ ಮನುಷ್ಯಜೀವಿಯ ಕರ್ತವ್ಯವಾಗಿದೆ. ಯಾವುದೇ ಹಬ್ಬಕ್ಕೆ ಸಿದ್ಧತೆ ಮಾಡಿಕೊಳ್ಳುವ ಅಗತ್ಯವೇ ಇಲ್ಲ. ಕೈ ಚಾಚಿದರೆ ಬೆರೆಸಿದ ಎಳ್ಳು-ಬೆಲ್ಲ ಸಿಗುತ್ತದೆ. ಬೇಕಾದ ಭಕ್ಷ್ಯವೂ ದೊರೆಯುತ್ತದೆ. ಕಷ್ಟವನ್ನೇ ಪಡುವ ಹಾಗಿಲ್ಲ. ಹಿಂದೆ ಉದ್ಯೋಗಸ್ಥ ಮಹಿಳೆಯರು ಮಾತ್ರ ಹೀಗೆ ಯೋಚಿಸುತ್ತಿದ್ದರು ಎನ್ನುವ ಹಾಗಿಲ್ಲ. ಈಗ ಪ್ರತಿ ಮನೆಯ ಗೃಹಿಣಿಯೂ ಈ ಪದ್ಧತಿಯನ್ನು ಅನುಸರಿಸುತ್ತಾಳೆ. ಕೇವಲ ಸೌಲಭ್ಯದ ದೃಷ್ಟಿಯಿಂದ ಮಾತ್ರವಲ್ಲ ನಿಜ ಹೇಳಬೇಕಾದರೆ ಎಲ್ಲರಿಗೂ ಸಮಯವೇ ತುಟ್ಟಿಯಾಗಿದೆ. ಇನ್ನು ಮಕ್ಕಳಿಲ್ಲದಿದ್ದರೆ ಎಳ್ಳು ಬೀರುವವರೇ ಇರುವುದಿಲ್ಲ. ಕೋವಿಡ್‌ನಿಂದಾಗಿ ಮನೆಮನೆಗೆ ಹೋಗಿ ಎಳ್ಳು ಕೊಡುವ ಸಂಪ್ರದಾಯ ಮಾಯವಾಗಿದೆ. ಕೋವಿಡ್ ನಂತರವೂ ಅದೇ ಪರಿಸ್ಥಿತಿ ಮುಂದುವರಿದಿದೆ.

ನಮ್ಮ ಬಾಲ್ಯದಲ್ಲಿ ಸಂಕ್ರಾಂತಿ ಎಂದರೆ ಮೂರು ತಿಂಗಳಿಂದ ಸಿದ್ಧತೆ ಬಯಸುವ ಹಬ್ಬವಾಗಿತ್ತು. ಆಗ ಯಾರೂ ಮಿಕ್ಸ್ ಮಾಡಿದ ಎಳ್ಳನ್ನು ತಂದು ಬೀರುತ್ತಿರಲಿಲ್ಲ. ಆ ಕಾಲದಲ್ಲಿ ಈ ಪ್ರಮಾಣದಲ್ಲಿ ಅಂಗಡಿಯವರು ಎಳ್ಳನ್ನು ಸಿದ್ಧ ಮಾಡುತ್ತಿರಲಿಲ್ಲವೇನೋ!

ಮನೆಯ ಯಜಮಾನಿಗೆ ಸಂಕ್ರಾಂತಿಗೆ ತಾನೇ ಎಳ್ಳು ಮಾಡಬೇಕು ಎಂಬ ಹಟ. ಕರಿ ಎಳ್ಳನ್ನು ತಂದು ಚೆನ್ನಾಗಿ ತೊಳೆದು ನೆನಸಿ ಅದನ್ನು ಕೈಯಿಂದ ಉಜ್ಜಿ ಬಿಳಿ ಬಣ್ಣಕ್ಕೆ ತಂದುಕೊಳ್ಳಬೇಕಾಗಿತ್ತು. ಕೊಬ್ಬರಿಯನ್ನು ಒಂದೇ ಆಕಾರಕ್ಕೆ ಕತ್ತರಿಸಿಕೊಳ್ಳಬೇಕಾಗಿತ್ತು. ಅದೇ ರೀತಿ ಬೆಲ್ಲವನ್ನು ಅಣಿ ಮಾಡಿಕೊಳ್ಳಬೇಕಾಗಿತ್ತು. ಆಗ ಎಲ್ಲರ ಮನೆಯಲ್ಲೂ ಸಕ್ಕರೆ ಅಚ್ಚು ಮಾಡುವ ಮಣೆ ಇರುತ್ತಿರಲಿಲ್ಲ. ಬೀದಿಯ ಗೃಹಿಣಿಯರು ಪ್ರತಿ ದಿನ ಒಬ್ಬರ ಮನೆಯಂತೆ ಎಲ್ಲರ ಮನೆಗೂ ಹೋಗಿ ಸಕ್ಕರೆ ಅಚ್ಚು ಮಾಡಿಕೊಡುತ್ತಿದ್ದರು. ಎಳ್ಳು ಬೀರಲು ಪಟ್ಟಾಪಟ್ಟೆ ಕಬ್ಬೇ ಆಗಬೇಕು. ಅದನ್ನು ತಂದ ದಿನವೇ ಮಕ್ಕಳಿಗೆ ತಿನ್ನಲು ಕೊಡುತ್ತಿದ್ದರು. ಇನ್ನು ಹಬ್ಬದ ದಿನ ಎಳ್ಳಿನ ಜೊತೆಗೆ ಬೆಲ್ಲ, ಕೊಬ್ಬರಿ, ಕಡಲೇಕಾಯಿಬೀಜ ಮತ್ತು ಹುರಿಗಡಲೆಯನ್ನು ಹದವಾಗಿ ಬೆರೆಸಿ ದೇವರಿಗೆ ನೈವೇದ್ಯ ಮಾಡಿ, ಮಕ್ಕಳಿಗೆ ಕೊಟ್ಟರೆ ಯಜಮಾನಿಯ ಮುಖದಲ್ಲಿ ಸಂತೃಪ್ತಿ. ಮೂರು ತಿಂಗಳ ತಮ್ಮ ದುಡಿಮೆಯಲ್ಲಿ ಆಗವರು ಸಾರ್ಥಕತೆಯನ್ನು ಕಾಣುತ್ತಿದ್ದರು. ಮನೆಮನೆಯ ಅಂಗಳಗಳು ವಿಧವಿಧವಾದ ರಂಗವಲ್ಲಿಯಿಂದ ಅಲಂಕೃತವಾಗಿರುತ್ತಿದ್ದವು. ಅದನ್ನು ನೋಡುವುದಕ್ಕೆ ಎಷ್ಟು ಆನಂದವೆಂದರೆ ಹೇಳಲಾಗದು.

ನನ್ನಮ್ಮ ನನಗೂ ಮತ್ತು ತಂಗಿ ಲಲಿತಾಳಿಗೂ ವಿಶೇಷವಾದ ಅಲಂಕಾರ ಮಾಡಿ ತಮ್ಮ ಸ್ನೇಹಿತರ ಮನೆಗೆ ಎಳ್ಳು ಬೀರಲು ಕಳುಹಿಸುತ್ತಿದ್ದರು. ನಮ್ಮನ್ನು ಮನೆಮನೆಗೂ ಕರೆದುಕೊಂಡು ಹೋಗುವ ಜವಾಬ್ದಾರಿ ಅಣ್ಣಂದಿರದು. ಕಲಾವಿದ ಸುಧೀಅಣ್ಣ ಪ್ರತಿಯೊಂದು ಮನೆಗೂ ವಿಶೇಷ ಚಿತ್ತಾರವುಳ್ಳ ಕವರ್‌ನ್ನು ಸಿದ್ಧ ಮಾಡುತ್ತಿದ್ದರು. ಈ ಎಳ್ಳಿನ ಸಮಾರಾಧನೆ ಒಂದೇ ದಿನಕ್ಕೆ ಮುಗಿದು ಹೋಗುತ್ತಿರಲಿಲ್ಲ. ಸುಮಾರು ಹದಿನೈದು ದಿನ ಮನೆಗೆ ಬಂದವರಿಗೆ ಅಥವಾ ಬೇರೆ ಊರಿಗೆ ಹೋಗುವವರಿಗೆ ಎಳ್ಳಿನ ಪ್ಯಾಕೆಟ್ಟು ಕೊಡಲಾಗುತ್ತಿತ್ತು. ಆ ಎಳ್ಳಿನಲ್ಲಿ ನಮ್ಮ ಸಂಸ್ಕೃತಿ ಮತ್ತು ಕುಟುಂಬದ ಪ್ರೀತಿ ಅಡಕವಾಗಿರುತ್ತಿತ್ತು. ಎಳ್ಳು ಕೊಡಲು ಯಾವುದೇ ಜಾತಿ, ಸಂಪ್ರದಾಯಗಳ ಗೊಡವೆಯಿರುತ್ತಿರಲಿಲ್ಲ. ನನ್ನ ಸ್ನೇಹಿತೆಯರು ಮಾರನೆಯ ದಿನ ಕಾಲೇಜಿನಲ್ಲಿ ಎಳ್ಳಿನ ಪ್ಯಾಕೆಟ್ಟು ಕೊಡುತ್ತಿದ್ದರು. ನಾವು ಅವರಿಗೆ ಕೊಡುತ್ತಿದ್ದೆವು. ಎಷ್ಟೋ ದಿನಗಳ ತನಕ ಹಬ್ಬದ ಸಂಭ್ರಮದ ಮಾತು.

ಈಗ ಹಬ್ಬವೆಂದರೆ ಆ ದಿನ ಮಾತ್ರ. ರಾತ್ರಿ ಕಳೆದು ಬೆಳಗಾದರೆ ಹಿಂದಿನ ದಿನದ ಯಾವ ಘಟನೆಯೂ ನೆನಪಿಗೆ ಬಾರದಷ್ಟು ನಾವು ವಾಸ್ತವವಾದಿಗಳಾಗಿದ್ದೇವೆ. ಹಬ್ಬದ ಆಚರಣೆ ಮಾಡಲೇಬೇಕಾದ ವಿಧಿಯೇ ಹೊರತು, ಅದನ್ನು ಸವಿಯುವ ಕ್ಷಣವಲ್ಲ.

⌘

Printed and Published by **Shridevi Media Center,** Lingapura, NH 4, Sira Road, Tumakuru - 572106,, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Ambika M Hulinaykar**